ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue:14 | ಸಂಪುಟ: 05 ಸಂಚಿಕೆ: 14 | Date: 20-01-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ


## ರಾಜ್ಯದ ಡಿಜಿಪಿಯ ರಾಸಲೀಲೆ ವಿಡಿಯೋ ಬಿಡುಗಡೆ: ಕ್ರಮಕ್ಕೆ ಒತ್ತಾಯ





ಕರ್ನಾಟಕದಲ್ಲಿ ಮತ್ತೊಂದು ರಾಸಲೀಲೆ ವಿಡಿಯೋ ಬಿಡುಗಡೆಯಾಗಿದೆ. ಇದರಲ್ಲಿ ಭಾಗಿಯಾಗಿರುವುದು ಯಾರೋ ರಾಜಕಾರಣಿಯಲ್ಲ. ರಾಜ್ಯದ ಡಿಜಿಪಿಯ ರಾಸಲೀಲೆ ವಿಡಿಯೋ ಬಿಡುಗಡೆಯಾಗಿದೆ. ಹೌದು.. ಕರ್ನಾಟಕದ ಡಿಜಿಪಿ ದರ್ಜೆಯ ಐಪಿಎಸ್ ಅಧಿಕಾರಿಯಾಗಿರುವ ಡಾ.ರಾಮಚಂದ್ರರಾವ್ ಬೆಂಗಳೂರಿನ ತಮ್ಮ ಕಚೇರಿಯಲ್ಲೇ ಮಹಿಳೆಯರ ಜೊತೆ ಸರಸ ಸಲ್ಲಾಪದಲ್ಲಿ ತೊಡಗಿದ್ದು, ಸದ್ಯ ರಾಸಲೀಲೆ ವಿಡಿಯೋ ವೈರಲ್ ಆಗಿದೆ. ಇದೀಗ ವಿಡಿಯೋ ವೈರಲ್ ಬೆನ್ನಲ್ಲೇ ರಾಮಚಂದ್ರ ರಾವ್ ಅವರಿಗೆ ಸಂಕಷ್ಟ ಎದುರಾಗಿದೆ.

ಕರ್ನಾಟಕ ಡಿಜಿಪಿ ರಾಮಚಂದ್ರ ರಾವ್ ರಾಸಲೀಲೆ ವಿಡಿಯೋ ಪ್ರಕರಣ ತೀವ್ರ ಸ್ವರೂಪ ಪಡೆದುಕೊಂಡಿದೆ. ಕರ್ತವ್ಯದ ಸಮಯದಲ್ಲೇ ಬೆಂಗಳೂರಿನಲ್ಲಿರುವ ಡಿಜಿಪಿ ಕಚೇರಿಯಲ್ಲೇ ಮಹಿಳೆಯರ ಜೊತೆ ಡಾ.ರಾಮಚಂದ್ರರಾವ್ ರಾಸಲೀಲೆ ನಡೆಸಿದ್ದು, ಸೀಕ್ರೆಟ್ ಕ್ಯಾಮರಾದಲ್ಲಿ ರೆಕಾರ್ಡ್ ಆಗಿದೆ. ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಿಳೆಯರನ್ನು ತಬ್ಬಿಕೊಂಡು ಮುತ್ತು ಕೊಟ್ಟಿದ್ದಾರೆ. ಒಂದು ವರ್ಷದ ಹಿಂದಿನ ವಿಡಿಯೋ ಎಂದು ಹೇಳಲಾಗಿದ್ದು, ಇದೀಗ ವೈರಲ್ ಆಗಿದೆ. ಇದು ಪೊಲೀಸ್ ಇಲಾಖೆಯ ಶಿಸ್ತು, ಘನತೆ, ಗೌರವಕ್ಕೆ ಧಕ್ಕೆ ತರುವ ವಿಷಯ. ಕಚೇರಿಯ ವೇಳೆಯಲ್ಲಿ ಪೊಲೀಸ್ ವಸ್ತ್ರದಲ್ಲೇ ರಾಮಚಂದ್ರ ರಾವ್ ರಾಸಲೀಲೆ ನಡೆಸಿರುವುದು ತೀವ್ರ ಟೀಕೆಗೆ ಗುರಿಯಾಗಿದೆ. ಸದ್ಯ ವಿಡಿಯೋ ವೈರಲ್ ಆಗುತ್ತಿದ್ದಂತೆಯೇ ಗೃಹ ಸಚಿವ ಪರಮೇಶ್ವರ್ ನಿವಾಸಕ್ಕೆ ದೌಡಾಯಿಸಿದ್ದಾರೆ. ಆದ್ರೆ, ಪರಮೇಶ್ವರ್ ಅವರು ಭೇಟಿಗೆ ನಿರಾಕರಿಸಿ ಮನೆ ಗೇಟಿನಿಂದಲೇ ವಾಪ್ ಕಳುಹಿಸಿದ್ದಾರೆ. ಮತ್ತೊಂದೆಡೆ ಈ ರಾಸಲೀಲೆ ವಿಡಿಯೋ ಬಗ್ಗೆ ಸ್ವತಃ ಸಿಎಂ ಸಿದ್ದರಾಮಯ್ಯ (ಖುಜಜಚಿಡಿಚಿಟಚುಚು) ಪ್ರತಿಕ್ರಿಯಿಸಿದ್ದು, ಸೂಕ್ತ ಕ್ರಮಕೈಗೊಳ್ಳುವುದಾಗಿ ಹೇಳಿದ್ದಾರೆ. ಹೀಗಾಗಿ ಡಿಜಿಪಿ ರಾಮಚಂದ್ರ ರಾವ್‌ಗೆ ಸಂಕಷ್ಟ ಎದುರಾಗಿದೆ.

### ಕ್ರಮದ ಬಗ್ಗೆ ಮಾತನಾಡಿದ ಸಿಎಂ

ಈ ಬಗ್ಗೆ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದ್ದು, ನನಗೆ ಇವತ್ತು ಬೆಳಗ್ಗೆ ಈ ವಿಚಾರ ಗೊತ್ತಾಗಿದೆ. ವಿಚಾರಣೆ ಮಾಡಿಸಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ. ಕಾನೂನು ಮುಂದೆ ಯಾರೂ ದೊಡ್ಡವರಲ್ಲ.ಎಷ್ಟೇ ಎತ್ತರ ವ್ಯಕ್ತಿಯಾದರೂ ಕ್ರಮ ಕೈಗೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಇದನ್ನು ಓದಿ: ಡಿಜಿಪಿ ರಾಮಚಂದ್ರ ರಾವ್ ರಾಸಲೀಲೆ ವಿಡಿಯೋ ವೈರಲ್: ಪೊಲೀಸ್ ಇಲಾಖೆ ಮಾನ ಹರಾಜು ಹಾಕಿದ ಹಿರಿಯ ಖಕಖ ಅಧಿಕಾರಿ

ತಮ್ಮ ರಾಸಲೀಲೆ ವಿಡಿಯೋ ಬಗ್ಗೆ ಡಿಜಿಪಿ ಹೇಳಿದ್ದೇನು?

ಇನ್ನು ರಾಮಚಂದ್ರ ರಾವ್ ರಾಸಲೀಲೆ ವಿಡಿಯೋ ಭಾರೀ ಸಂಚಲನ ಮೂಡಿಸಿದೆ. ಇದರ ಬೆನ್ನಲ್ಲೇ ಖುದ್ದು ರಾಮಚಂದ್ರ ರಾವ್ ಅವರು ಗೃಹ ಸಚಿವ ಡಾ ಜಿ ಪರಮೇಸ್ವರ್ ನಿವಾಸಕ್ಕೆ ದೌಡಾಯಿಸಿದ್ದಾರೆ. ಈ ವೇಳೆ ರಾಮಚಂದ್ರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಎಂಟು ವರ್ಷದ ಹಿಂದೆ ನಾನು ಬೆಳಗಾವಿಯಲ್ಲಿದ್ದೆ. ಇದರ ಬಗ್ಗೆ ನಾನು ವಕೀಲರ ಜೊತೆಗೆ ಮಾತನಾಡುತ್ತೇನೆ. ಇದರ ಬಗ್ಗೆ ತನಿಖೆ ಆಗಬೇಕು.ಗೃಹ ಸಚಿವರಿಗೆ ಮಾಹಿತಿ ನೀಡಲು ಬಂದಿದ್ದೇನೆ ಎಂದು ತಿಳಿಸಿದರು.

### ಗೇಟ್‌ನಲ್ಲೇ ವಾಪಸ್ ಕಳುಹಿಸಿದ ಪರಮೇಶ್ವರ್

ಸಮವಸ್ತ್ರದಲ್ಲೇ ಮಹಿಳೆಯರೊಂದಿಗಿನ ರಾಸಲೀಲೆ ವಿಡಿಯೋ ಬಯಲಿಗೆ ಬರುತ್ತಿದ್ದಂತೆಯೇ ಸ್ಪಷ್ಟನೆ ನೀಡಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರನ್ನು ಭೇಟಿ ಮಾಡಲು ಬಂದಿದ್ದರು. ಆದರೆ, ಪರಮೇಶ್ವರ್ ಅವರು ರಾಮಚಂದ್ರ ರಾವ್ ಅವರನ್ನು ಭೇಟಿಗೆ ನಿರಾಕರಿಸಿ ಮನೆಯ ಗೇಟ್‌ನಿಂದಲೇ ವಾಪಸ್ ಕಳಿಸಿದ್ದಾರೆ.

### ಸರ್ಕಾರಕ್ಕೆ ಶಾಸಕ ಸುರೇಶ್ ಕುಮಾರ್ ಮಹತ್ವದ ಸಲಹೆ

ಈ ಬಗ್ಗೆ ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಸಾಮಾಜಿಕ ಜಾಲತಾಣದ ಮೂಲಕ ಪ್ರತಿಕ್ರಿಯಿಸಿದ್ದು, ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಘನಕಾರ್ಯ ಅಕ್ಷಮ್ಯ ಅಪರಾಧ. ರಾಮಚಂದ್ರ ರಾವ್ ಇಡೀ ಪೊಲೀಸ್ ಇಲಾಖೆಗೆ ಕಳಂಕ ಮೆತ್ತುವ ಕಾರ್ಯವೆಸಗಿದ್ದಾರೆ. ಹಿಂದೆ ಅವರ ಹೆಸರು ಮತ್ತು ಸ್ಥಾನದ ದುರುಪಯೋಗ ಮಾಡಿಕೊಂಡು ಭಾರಿ ಪ್ರಮಾಣದ ಚಿನ್ನದ ಸ್ಮಗ್ಲಿಂಗ್ ನಡೆದಿದ್ದಾಗ ಈ ಅಧಿಕಾರಿಯನ್ನು ಕಡ್ಡಾಯ ರಜೆಯ ಮೇಲೆ ಕಳಿಸಿ ಸರ್ಕಾರ ಕೈ ತೊಳೆದುಕೊಂಡಿತ್ತು. ಇದೀಗ ಪ್ರಕಟವಾಗಿರುವ ಈ ಪೊಲೀಸ್ ಅಧಿಕಾರಿಯ ಘನಂಧಾರಿ ಕಾರ್ಯವನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಶೀಲಿಸಬೇಕು. ಮತ್ತೆ ಕಡ್ಡಾಯ ರಜೆ ಮೇಲೆ ಕಳಿಸಿ ಕೈ ತೊಳೆದುಕೊಳ್ಳುವುದು ಸರ್ಕಾರಕ್ಕೆ ಭೂಷಣವಲ್ಲ ಎಂದು ಸಲಹೆ ನೀಡಿದ್ದಾರೆ.

ಸಮವಸ್ತ್ರದಲ್ಲಿಯೇ ತನ್ನ ಕಚೇರಿಯಲ್ಲಿಯೇ ಈ ಹಿರಿಯ ಅಧಿಕಾರಿ ಮಾಡಿರುವ ಕೃತ್ಯ ಪೊಲೀಸ ಇಲಾಖೆಯನ್ನೇ ಸಂಶಯದಿಂದ ಅನುಮಾನದಿಂದ ನೋಡುವಂತಾಗಿದೆ. ಐಪಿಎಸ್ ಎಂಬ ಅತ್ಯಂತ ಜವಾಬ್ದಾರಿಯುತ ಹೆಸರಿಗೆ ಈ ವ್ಯಕ್ತಿ ಇಂದು ಅಪಚಾರ ವೆಸಗಿದ್ದಾರೆ. ಸಮಾಜಕ್ಕೆ ಒಳ್ಳೆಯ ಸಂದೇಶ ಕಳಿಸಬೇಕೆಂದರೆ ಸರ್ಕಾರ ಈ ಬಗ್ಗೆ ತುರ್ತು ಮತ್ತು ಪರಿಣಾಮ ಕಾರಿ ಕ್ರಮವನ್ನು ಘೋಷಿಸಬೇಕು. ಇಲ್ಲದಿದ್ದರೆ ಇಡೀ ಆಡಳಿತವೇ ಕಡ್ಡಾಯ ರಜೆ ಮೇಲೆ ಹೋದಂತೆ ಜನ ಭಾವಿಸುತ್ತಾರೆ ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ ಈ ರಾಸಲೀಲೆ ಪ್ರಕರಣ ತೀವ್ರ ಸ್ವರೂಪ ಪಡೆದುಕೊಂಡಿದ್ದು ಪೊಲೀಸರ ನಡೆಯಿಂದಲೇ ಮೇಲಿಂದ ಮೇಲೆ ಸರ್ಕಾರಕ್ಕೆ ಮುಜುಗರ ಉಂಟು ಮಾಡುವ ಘಟನೆಗಳು ನಡೆಯುತ್ತಿವೆ. ಇದೀಗ ರಾಮಚಂದ್ರ ರಾಸಲೀಲೆ ಸಂಬಂಧ ಸಿಎಂ ಹಾಗೂ ಗೃಹ ಸಚಿವರು ಕೆಂಡಾಮಂಡಲರಾಗುದ್ದಾರೆ. ಹೀಗಾಗಿ ಡಿಜಿಪಿ ರಾಮಚಂದ್ರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವ ಎಲ್ಲಾ ಸಾಧ್ಯತೆಗಳಿವೆ.

### ಗಿಲ್ಲಿ ನಟನಿಗೆ ಬಿಗ್ ಬಾಸ್ ಕಿರೀಟ; ಗಿಲ್ಲಿಯೂರಿನಲ್ಲಿ ಹಬ್ಬ

## ಗಿಲ್ಲಿಗೆ ಸಿಕ್ಕ ಬಹುಮಾನವೆಷ್ಟು




ಬೆಂಗಳೂರು: ತೀವ್ರ ಕುತೂಹಲ ಕೆರಳಿಸಿದ್ದ ದೊಡ್ಮನೆಯ ಆಟಕ್ಕೆ ಭಾನುವಾರ ರಾತ್ರಿ ತೆರೆ ಬಿದಿದ್ದು, ಗಿಲ್ಲಿ ನಟರಾಜ್ ಈ ಬಾರಿಯ 'ಬಿಗ್ ಬಾಸ್ ಕನ್ನಡ 12' ವಿನ್ನರ್ ಆಗಿದ್ದು, ರಕ್ಷಿತಾ ರನ್ನರ್ ಅಪ್ ಆಗಿದ್ದಾರೆ. ಅಶ್ವಿನಿ ಗೌಡ ಅವರು ಎರಡನೇ ರನ್ನರ್ ಅಪ್ ಆಗಿದ್ದಾರೆ.

ಈ ಬಾರಿಯ ಬಿಗ್‌ಬಾಸ್ ಸೀಸನ್ 12 ಗೆದ್ದ ಗಿಲ್ಲಿಗೆ 50 ಲಕ್ಷ ರೂಪಾಯಿ ಕ್ಯಾಶ್ ಪ್ರೈಸ್ ಜೊತೆ ಭರ್ಜರಿ ಗಿಫ್ಟ್ ಕೂಡ ಸಿಕ್ಕಿದೆ. ಬಾರಿ ಬಿಗ್‌ಬಾಸ್ 12 ಗೆದ್ದವರಿಗೆ ಕ್ಯಾಶ್ ಪ್ರೈಸ್ ಜೊತೆ ಮಾರುತಿ ಸುಜುಕಿ ವಿಕ್ಟೋರಿಸ್ ಕಾರು ಕೂಡ ಉಡುಗೊರೆಯಾಗಿ ನೀಡಲಾಗಿದೆ.

ಈ ಬಾರಿಯ ಸೀಸನ್ ಸಿಕ್ಕಾಪಟ್ಟೆ ಸದ್ದು ಮಾಡಿತ್ತು. ಕಳೆದೆಲ್ಲಾ ಸೀಸನ್‌ಗಳಿಗಿಂತ ಈ ಸೀಸನ್ ಕಂಟೆಸ್ಟೆಂಟ್‌ಗೆ ಹೆಚ್ಚಿನ ಜನ ಬೆಂಬಲ ಸಿಕ್ಕಿದೆ. ಎರಡನೇ ರನ್ನರ್ ಅಪ್ ಆದ ಅಶ್ವಿನಿ ಅವರಿಗೆ 14 ಲಕ್ಷ ರೂಪಾಯಿ ಹಾಗೂ ಬಿಗ್ ಬಾಸ್ ಫಿನಾಲೆಯಿಂದ ನಾಲ್ಕನೇ ಸ್ಪರ್ಧಿಯಾಗಿ ಹೊರಗೆ ಹೋದ ಕಾವ್ಯಾ ಅವರಿಗೆ 10 ಲಕ್ಷ ರೂಪಾಯಿ ಬಹುಮಾನ ನೀಡಲಾಗಿದೆ.

ಈ ಸೀಸನ್ ನಲ್ಲಿ ಒಟ್ಟು 24 ಸ್ಪರ್ಧಿಗಳು ಬಿಗ್ ಬಾಸ್ ಮನೆಗೆ ಹೋಗಿದ್ದರು. ಅಂತಿಮವಾಗಿ 6 ಸ್ಪರ್ಧಿಗಳು ಫಿನಾಲೆಗೆ ಬಂದಿದ್ದರು. ಅಶ್ವಿನಿ ಗೌಡ, ರಕ್ಷಿತಾ ಶೆಟ್ಟಿ, ಮ್ಯೂಟೆಂಟ್ ರಘು, ಕಾವ್ಯಾ ಶೈವ, ಧನುಷ್ ಹಾಗೂ ಗಿಲ್ಲಿ ನಟ ಫಿನಾಲೆ ತಲುಪಿದ್ದರು.

### ಗಿಲ್ಲಿಯೂರಿನಲ್ಲಿ ಹಬ್ಬ

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ದಡದಪುರ ಗಿಲ್ಲಿ ನಟನ ಊರು. ವಿಜಯಿ ಯಾರೆಂಬುದು ಘೋಷಣೆಯಾಗುತ್ತಿದ್ದಂತೆ ದಡದಪುರದಲ್ಲಿ ವಿಜಯ ಪತಾಕೆ ಹಾರಿದೆ. ಗ್ರಾಮದ ತುಂಬೆಲ್ಲ ಹಬ್ಬದ ವಾತಾವರಣ ಸೃಷ್ಟಿಯಾಗಿದೆ.

ಜೊತೆಯಲ್ಲಿ ಒಡನಾಡಿದವರು, ಕಷ್ಟಕ್ಕೆ ಹೆಗಲಾದವರು, ನೆರೆಹೊರೆಯವರೆಲ್ಲ ಪರಸ್ಪರ ಸಿಹಿ ತಿನ್ನಿಸಿ ಖುಷಿಯನ್ನು ಹಂಚಿಕೊಂಡಿದ್ದಾರೆ. ಗಿಲ್ಲಿ ಫೋಟೊಗಳಿಗೆ ಹಾಲೆರೆದು ಸಂಭ್ರಮಿಸಿದ್ದಾರೆ.

ಊರಿನ ಪ್ರಮುಖ ವೃತ್ತಗಳಲ್ಲೆಲ್ಲಾ ಗಿಲ್ಲಿಯ ದೊಡ್ಡ ದೊಡ್ಡ ಕಟೌಟ್‌ಗಳು ರಾರಾಜಿಸುತ್ತಿವೆ.

ಹಾಸ್ಯವೆನ್ನುವಂತಾಗಿರುವ ಹೊತ್ತಿನಲ್ಲಿ, ನಿಜವಾದ ಹಾಸ್ಯವನ್ನು ತೋರಿದವನು ಗಿಲ್ಲಿ. ಆ ಕಾರಣಕ್ಕೆ ಸದ್ಯದ ಹಾಸ್ಯ ಕಲಾವಿದರ ನಡುವೆ ನಮ್ಮೂರಿನ ಯುವಕ ವಿಶೇಷವಾಗಿ ಕಾಣುತ್ತಾನೆ. ಚಿಕ್ಕ–ಪುಟ್ಟ ವಿಚಾರಗಳಲ್ಲೂ ಹಾಸ್ಯ ಹುಡುಕುವ, ಸಣ್ಣ ಎಳೆಯನ್ನು ಇಟ್ಟುಕೊಂಡು ನಗೆ ಚಟಾಕಿ ಹಾರಿಸಿ ಹೊಟ್ಟೆ ಹುಣ್ಣಾಗುವಂತೆ ಮಾಡುವ ಗಿಲ್ಲಿ ಗೆಲುವಿಗೆ ನಿಜವಾಗಿಯೂ ಅರ್ಹ' ಎಂದು ಗ್ರಾಮದ ನಿವಾಸಿ ಹಾಗೂ ಸದ್ಯ ಪೊಲೀಸ್ ಇಲಾಖೆಯಲ್ಲಿರುವ ದೇವರಾಜು ಎನ್. ಹೇಳಿದ್ದಾರೆ.

### ಗಿಲ್ಲಿಗೆ ಸಿಕ್ಕ ಬಹುಮಾನವೆಷ್ಟು

ಗಿಲ್ಲಿ ನಟ ಬಿಗ್‌ಬಾಸ್ ಕನ್ನಡ ಸೀಸನ್ 12ಕ್ಕೆ ಎಂಟ್ರಿ ಕೊಟ್ಟು, ತಮ್ಮ ಖಡಕ್ ಡೈಲಾಗ್‌ಗಳ ಮೂಲಕವೇ ಎಲ್ಲರ ಗಮನ ಸೆಳೆದರು. ಗಿಲ್ಲಿ ಅವರ ಮಾತು, ತಮಾಷೆ ಎಲ್ಲರಿಗೂ ಇಷ್ಟವಾಗಿತ್ತು. ಅಲ್ಲದೇ ಸಾಮಾಜಿಕ ಮಾಧ್ಯಮದಲ್ಲಿ ಗಿಲ್ಲಿ ನಟನ ಪರ ಅಬ್ಬರದ ಪ್ರಚಾರ ನಡೆದಿತ್ತು. ಅದಕ್ಕೆ ಸಾಕ್ಷಿ ಎಂಬಂತೆ ಈಗ ಬಿಗ್‌ಬಾಸ್ ಟ್ರೋಫಿ ಗೆದ್ದುಕೊಂಡಿದ್ದಾರೆ. ಪ್ರತಿ ಸೀಸನ್ ನಂತೆಯೇ ಈ ಬಾರಿಯೂ ಬಿಗ್‌ಬಾಸ್ ವಿನ್ನರ್ ಗಿಲ್ಲಿಗೆ ಟ್ರೋಫಿ ಜೊತೆಗೆ 50 ಲಕ್ಷ ಹಾಗೂ ಮಾರುತಿ ಸುಜುಕಿ ಎಸ್‌ಯುವಿ ವಿಕ್ಟೋರಿಯಸ್ ಕಾರನ್ನು ಬಹುಮಾನದ ರೂಪದಲ್ಲಿ ನೀಡಲಾಗಿದೆ. ವಿಶೇಷ ಎಂದರೆ ಕಿಚ್ಚ ಸುದೀಪ್ ಅವರು ವೈಯಕ್ತಿಕವಾಗಿ ಪ್ರೀತಿಯಿಂದ 10 ಲಕ್ಷ ಕೊಡುತ್ತಿದ್ದೇನೆ ಎಂದು ವೇದಿಕೆ ಮೇಲೆ ಘೋಷಿಸಿದ್ದಾರೆ.

## ತಂದೆ ಜಾಗ ನೀಡಿದ್ದ ಆಸ್ಪತ್ರೆಯಲ್ಲೇ ಮಗನ ದುರಂತ ಅಂತ್ಯ: ಸಮಯಕ್ಕೆ ಬಾರದ ಅಂಬುಲೆನ್ಸ್!





ಸಮಯಕ್ಕೆ ಸರಿಯಾಗಿ ಅಂಬುಲೆನ್ಸ್ ಸಿಗದ ಕಾರಣ ರೋಗಿಯೊಬ್ಬರು ದಾರುಣವಾಗಿ ಮೃತಪಟ್ಟಿರುವ ಘಟನೆ ತುಮಕೂರಿನ ಪಾವಗಡದಲ್ಲಿ ನಡೆದಿದೆ. ರೋಗಿಯ ಬಿಪಿ ಕಡಿಮೆಯಾದ ಕಾರಣ ಹೆಚ್ಚಿನ ಚಿಕಿತ್ಸೆಗೆ ತಾಲೂಕು ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಿದ್ದರು. ಆದ್ರೆ 1 ಗಂಟೆ ಕಾದರೂ ಅಂಬುಲೆನ್ಸ್ ಸಿಕ್ಕಿಲ ಎನ್ನಲಾಗಿದೆ. ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ಕುಟುಂಬಸ್ಥರು ಆಕ್ರೋಶ ಹೊರಹಾಕಿದ್ದು, ನಮಗಾದ ತೊಂದರೆ ಮತ್ಯಾರಿಗೂ ಆಗಬಾರದು ಎಂದು ಅಲವತ್ತುಕೊಂಡಿದ್ದಾರೆ.

ಸಮಯಕ್ಕೆ ಸರಿಯಾಗಿ ಅಂಬುಲೆನ್ಸ್ ಸಿಗದ ಕಾರಣ ಉಸಿರಾಟ ತೊಂದರೆಯಿಂದ ಬಳಲುತ್ತಿದ್ದ ರೋಗಿಯೊಬ್ಬರು ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ವೈ.ಎನ್. ಹೊಸಕೋಟೆಯಲ್ಲಿ ನಡೆದಿದೆ. ಸೈಯ್ಯದ್ ಅಕ್ರಮ್(42) ಮೃತ ದುರ್ದೈವಿಯಾಗಿದ್ದು, ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ಕುಟುಂಬಸ್ಥರು ಆಕ್ರೋಶ ಹೊರಹಾಕಿದ್ದು, ನಮಗಾದ ತೊಂದರೆ ಮತ್ಯಾರಿಗೂ ಆಗಬಾರದು ಎಂದು ಅಲವತ್ತುಕೊಂಡಿದ್ದಾರೆ.

### 1 ಗಂಟೆ ಕಾದರೂ ಸಿಗದ ಅಂಬುಲೆನ್ಸ್!

ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಸೈಯ್ಯದ್ ಅಕ್ರಮ್‌ರನ್ನು ಸೋದರ ನಯಾಜ್ ಜ.16ರಂದು ಸಮುದಾಯದ ಆರೋಗ್ಯ ಕೇಂದ್ರಕ್ಕೆ ಕರೆತಂದಿದ್ದರು. ಪರೀಕ್ಷೆ ನಡೆಸಿದ ವೈದ್ಯರು ರೋಗಿಯ ಬಿಪಿ ಕಡಿಮೆಯಾಗಿದೆ ಎಂದಿದ್ದು, ಹೆಚ್ಚಿನ ಚಿಕಿತ್ಸೆಗೆ ತಾಲೂಕು ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಿದ್ದಾರೆ. ಆದರೆ ರೋಗಿಯ ಸ್ಥಳಾಂತರಕ್ಕೆ ಸುಮಾರು 1 ಗಂಟೆ ಕಾದರೂ ಅಂಬುಲೆನ್ಸ್ ಸಿಕ್ಕಿಲ್ಲ. ಆಸ್ಪತ್ರೆಯಲ್ಲಿ ಅಂಬುಲೆನ್ಸ್ ಇದ್ರೂ ಚಾಲಕನಿಲ್ಲ ಎನ್ನಲಾಗಿದೆ. ಹೀಗಾಗಿ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದ ಕಾರಣ ತಮ್ಮ ಸಹೋದರ ಮೃತಪಟ್ಟಿದ್ದಾನೆ ಎಂಬುದು ನಯಾಜ್ ಆರೋಪ.

ಒಂದೂವರೆ ಎಕರೆ ಜಮೀನು ನೀಡಿದ್ದ ಸೈಯದ್ ತಂದೆ

ಇನ್ನು ಈ ಆಸ್ಪತ್ರೆಯ ನಿರ್ಮಾಣಕ್ಕೆ ಭೂಮಿ ದಾನ ಮಾಡಿದಿದ್ದು ಮೃತ ಸೈಯ್ಯದ್ ತಂದೆ. ಜನರ ಜೀವ ಉಳಿಸಲು ಆಸ್ಪತ್ರೆಯ ಅಗತ್ಯ ಮನಗಂಡಿದ್ದ ಅವರು, ಕೋಟ್ಯಂತರ ಮೌಲ್ಯದ ಒಂದೂವರೆ ಎಕರೆ ಭೂಮಿಯನ್ನು ನೀಡಿದ್ದರು. ಆದರೆ ದುರ್ದೈವ ಎಂಬಂತೆ ಅದೇ ಜಾಗದಲ್ಲೀಗ ಅವರ ಮಗ ಸರಿಯಾಗಿ ಚಿಕಿತ್ಸೆ ಸಿಗದೆ ಪ್ರಾಣ ಕಳೆದುಕೊಂಡಿದ್ದಾರೆ. ನನ್ನ ಸಹೋದರನಿಗೆ ಬಂದ ಪರಿಸ್ಥಿತಿ ಯಾರಿಗೂ ಬರಬಾರದು. ಆಸ್ಪತ್ರೆಗೆ ಕೂಡಲೇ ಅಗತ್ಯ ತಜ್ಞ ವೈದ್ಯರು, ಸಿಬ್ಬಂದಿ ಮತ್ತು ಅಂಬುಲೆನ್ಸ್ ವ್ಯವಸ್ಥೆಯನ್ನು ಮಾಡುವ ಮೂಲಕ ಸರ್ಕಾರ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ನಯಾಜ್ ಕಣ್ಣೀರು ಹಾಕಿದ್ದಾರೆ.

## ಟೀಮ್ ಇಂಡಿಯಾದ ಮುಂದಿನ ಸರಣಿ ಯಾರ ವಿರುದ್ಧ

ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಟಿ20 ಸರಣಿಯು ಜನವರಿ 21 ರಿಂದ ಶುರುವಾಗಲಿದೆ. ಈ ಸರಣಿಯಲ್ಲಿ ಉಭಯ ತಂಡಗಳು ಒಟ್ಟು 5 ಪಂದ್ಯಗಳನ್ನಾಡಲಿದೆ. ಈ ಸರಣಿಯ ಮುಕ್ತಾಯದ ಬೆನ್ನಲ್ಲೇ ಟೀಮ್ ಇಂಡಿಯಾ ಟಿ20 ವಿಶ್ವಕಪ್‌ನಲ್ಲಿ ಕಣಕ್ಕಿಳಿಯಲಿದೆ.

ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಏಕದಿನ ಸರಣಿ ಮುಗಿದಿದೆ. ಮೂರು ಪಂದ್ಯಗಳ ಸರಣಿಯನ್ನು ನ್ಯೂಝಿಲೆಂಡ್ ತಂಡವು 2–1 ಅಂತರದಿಂದ ಗೆದ್ದುಕೊಂಡಿದೆ. ಇನ್ನು ಉಭಯ ತಂಡಗಳು ಟಿ20 ಸರಣಿಗಾಗಿ ಸಜ್ಜಾಗಲಿದೆ. ಅಂದರೆ ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಜನವರಿ 21 ರಿಂದ ಟಿ20 ಸರಣಿ ಶುರುವಾಗಲಿದೆ

ಈ ಸರಣಿಯಲ್ಲಿ ಉಭಯ ತಂಡಗಳು ಒಟ್ಟು 5 ಪಂದ್ಯಗಳಲ್ಲಿ ಮುಖಾಮುಖಿಯಾಗಲಿದೆ. ಮೊದಲ ಪಂದ್ಯವು ನಾಗ್ಪುರದಲ್ಲಿ ನಡೆದರೆ, ಎರಡನೇ ಪಂದ್ಯಕ್ಕೆ ರಾಯ್ಪುರದ ಸ್ಟೇಡಿಯಂ ಆತಿಥ್ಯವಹಿಸಲಿದೆ. ಇನ್ನು ಗುವಾಹಟಿಯಲ್ಲಿ ಮೂರನೇ ಪಂದ್ಯ ನಡೆಯಲಿದೆ. ಹಾಗೆಯೇ ನಾಲ್ಕನೇ ಮತ್ತು ಐದನೇ ಪಂದ್ಯಗಳು ಕ್ರಮವಾಗಿ ವಿಶಾಖಪಟ್ಟಣ ಮತ್ತು ತಿರುವನಂತಪುರದಲ್ಲಿ ಜರುಗಲಿದೆ.ಈ ಐದು ಪಂದ್ಯಗಳ ಬಳಿಕ ಟೀಮ್ ಇಂಡಿಯಾ ಟಿ20 ವಿಶ್ವಕಪ್ ನಲ್ಲಿ ಕಣಕ್ಕಿಳಿಯಲಿದೆ. ಅಂದರೆ ಜನವರಿ 31 ರಂದು ಐದು ಮ್ಯಾಚ್‌ಗಳ ಸರಣಿ ಮುಗಿಯಲಿದ್ದು, ಇದಾದ ಬಳಿಕ ಟೀಮ್ ಇಂಡಿಯಾ ಆಟಗಾರರಿಗೆ ಕೆಲ ದಿನಗಳ ವಿಶ್ರಾಂತಿ ಸಿಗಲಿದೆ. ಆ ಬಳಿಕ ಟೀಮ್ ಇಂಡಿಯಾ ಫೆಬ್ರವರಿ 7 ರಿಂದ ಟಿ20 ವಿಶ್ವಕಪ್ ಅಭಿಯಾನ ಶುರು ಮಾಡಲಿದೆ. ಹೀಗಾಗಿ ನ್ಯೂಝಿಲೆಂಡ್ ವಿರುದ್ಧದ ಟಿ20 ಸರಣಿಯು ಭಾರತ ತಂಡದ ಪಾಲಿಗೆ ಮಹತ್ವದ್ದಾಗಿ ಪರಿಣಮಿಸಿದೆ.

## ರಸ್ತೆ ಸುರಕ್ಷತಾ ಮಾಸಾಚರಣೆ: ಹೆಚ್ಚುತ್ತಿರುವ ರಸ್ತೆ ಅಪಘಾತ ತಡೆಗೆ ವಿಶೇಷ ಕಾರ್ಯಯೋಜನೆ




ತುಮಕೂರು: ರಾಜ್ಯದಲ್ಲಿಯೇ ಅತಿಹೆಚ್ಚು ರಸ್ತೆ ಅಪಘಾತ ಪ್ರಕರಣಗಳಲ್ಲಿ ತುಮಕೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಈ ಪರಿಸ್ಥಿತಿಯಲ್ಲಿ ಅಪಘಾತ ಪ್ರಕರಣಗಳ ತಡೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ. ಅಪಘಾತ ಹೆಚ್ಚಳಕ್ಕೆ ಕಾರಣಗಳನ್ನು ಪತ್ತೆ ಮಾಡಿ ನಿಯಂತ್ರಿಸಲು ಅನುಸರಿಸಬೇಕಾದ ವೈಜ್ಞಾನಿಕ ಕ್ರಮ ರೂಪಿಸಲಾಗುತ್ತಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎ.ಎಂ.ಪ್ರಸಾದ್ ಹೇಳಿದರು.

ಸೋಮವಾರ ನಗರದ ಸಿಎಸ್‌ಐ ಸಂಸ್ಥೆಯ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ರೋಟರಿ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸ್ತೆ ಅಪಘಾತಗಳು ಸಂಭವಿಸುತ್ತಿರುವುದಕ್ಕೆ ಕಾರಣಗಳೇನು ಎಂಬುದನ್ನು ಸಮಿತಿ ಅಧ್ಯಯನ ಮಾಡಿ, ಅಪಘಾತ ನಿಯಂತ್ರಣಕ್ಕೆ ಸೂಕ್ತ ಕಾರ್ಯಕ್ರಮ ರೂಪಿಸಲಿದೆ. ಅಪಘಾತ ವಲಯಗಳನ್ನು ಗುರುತಿಸಿ ಅಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ನಿರ್ವಹಿಸಲಿದೆ ಎಂದು ತಿಳಿಸಿದರು.

ರಸ್ತೆ ಅಪಘಾತ ನಿಯಂತ್ರಣದಲ್ಲಿ ಪ್ರಮುಖವಾಗಿ ವಾಹನ ಚಾಲನೆ ಮಾಡುವವರಲ್ಲಿ ರಸ್ತೆ ನಿಯಮಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕಾಗಿದೆ. ವಿಶೇಷವಾಗಿ ವಿದ್ಯಾರ್ಥಿಗಳು, ಯುವಜನರು ಅಪಘಾತಕ್ಕೀಡಾಗುತ್ತಿರುವ ಪ್ರಕರಣ ಹೆಚ್ಚಾಗುತ್ತಿವೆ. ಇವರು ರಸ್ತೆ ನಿಯಮಗಳು ಹಾಗೂ ವಾಹನ ಚಾಲನಾ ಪರವಾನಗಿ, ಅಗತ್ಯ ದಾಖಲಾತಿ ಹೊಂದುವುದು ಕಡ್ಡಾಯವಾಗಿದೆ. ಈ ಬಗ್ಗೆ ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಸಂಚಾರ ಸುರಕ್ಷತೆ ಬಗ್ಗೆ ಅರಿವು ಮೂಡಿಸಲಾಗುತ್ತದೆ ಎಂದರು.

ರಾಜ್ಯ ವಾಹನ ತರಬೇತಿ ಶಾಲೆಗಳ ಒಕ್ಕೂಟದ ಗೌರವಾಧ್ಯಕ್ಷ ಟಿ.ಆರ್.ಸದಾಶಿವಯ್ಯ ಮಾತನಾಡಿ, ಸಾರಿಗೆ ಪ್ರಾಧಿಕಾರ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಸಹಯೋಗದಲ್ಲಿ ರೋಟರಿ ಸಂಸ್ಥೆ, ವಾಹನ ತರಬೇತಿ ಶಾಲೆ ಸಂಘದಿಂದ ಜಿಲ್ಲೆಯ ಎಲ್ಲಾ ಶಾಲೆ, ಕಾಲೇಜು ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಗುವುದು. 18 ವರ್ಷಕ್ಕೆ ಕಡಿಮೆ ವಯಸ್ಸಿನವರು ವಾಹನ ಚಲಾಯಿಸಬಾರದು. ಈ ಬಗ್ಗೆ ಪೋಷಕರು ಮಕ್ಕಳಲ್ಲಿ ತಿಳುವಳಿಕೆ ಮೂಡಿಸಬೇಕು. 18 ವರ್ಷದ ನಂತರ ವಾಹನ ಚಾಲನಾ ಪರವಾನಗಿ ಪಡೆಯಬೇಕು. ಚಲಾಯಿಸುವ ವಾಹನಗಳ ಅಗತ್ಯ ದಾಖಲಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ವೇಗದ ಚಾಲನೆ, ವ್ಹೀಲಿಂಗ್‌ನಂತಹ ವಿಕೃತ ಮೆರೆದರೆ ಅಪಘಾತದಲ್ಲಿ ಜೀವ ಕಳೆದುಕೊಳ್ಳುವ ಅಪಾಯವಿದೆ ಎಂದು ವಿದ್ಯಾರ್ಥಿಗಳಿಗೆ ಎಚ್ಚರಿಸಿದರು.

ಸಿಎಸ್‌ಐ ವಲಯ ಅಧ್ಯಕ್ಷರಾದ ರೆವರೆಂಡ್ ಮನೋಜ್‌ಕುಮಾರ್ ಅವರು ಮಾತನಾಡಿ, ರಸ್ತೆ ಸುರಕ್ಷತೆ ಬಗ್ಗೆ ಇಲಾಖೆ ಅಥವಾ ಸಂಘಸಂಸ್ಥೆಗಳು ಮಕ್ಕಳಿಗೆ ಅರಿವು ಮೂಡಿಸಿದರೆ ಸಾಲದು, ಶಾಲೆ ಕಾಲೇಜುಗಳಲ್ಲಿ ಬೋಧಕರು ಸಂಚಾರ ನಿಯಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. ತಮ್ಮ ಸಂಸ್ಥೆಯ ಶಾಲಾಕಾಲೇಜು ಬೋಧಕರಿಗೆ ಈ ಬಗ್ಗೆ ಸೂಚನೆ ನೀಡುವುದಾಗಿ ಹೇಳಿದರು.

ರೋಟರಿ ತುಮಕೂರು ಅಧ್ಯಕ್ಷ ಡಾ.ಎ.ಎಸ್.ಸುದರ್ಶನ್, ರೋಟರಿ ಜಿಲ್ಲಾ ಕಾರ್ಯದರ್ಶಿ ಎಂ.ಎಸ್.ಉಮೇಶ್, ಕಾರ್ಯದರ್ಶಿ ಮಲ್ಲೇಶಯ್ಯ, ಸಮುದಾಯ ಸೇವೆ ನಿರ್ದೇಶಕಿ ಚಂದ್ರಕಲಾ, ಮುಖಂಡರಾದ ಮೀರಾರಾಣಿ, ಅನಿತಾ ನಾಗೇಶ್ ಮೊದಲಾದವರು ಭಾಗವಹಿಸಿದ್ದರು.

## ಶಾಲೆಯಲ್ಲಿ ಗಮನ ಸೆಳೆದ ಸುಗ್ಗಿ ಸಂಭ್ರಮ



ತುಮಕೂರು– ಹಳ್ಳಿಗಾಡಿನಲ್ಲೇ ಗ್ರಾಮೀಣ ಸೊಗಡು ಕಣ್ಮರೆಯಾಗುತ್ತಿರುವ ಈ ಆಧುನಿಕ ಪ್ರಪಂಚದಲ್ಲಿ ಹಳ್ಳಿ ಸೊಗಡನ್ನು ಮಕ್ಕಳಿಗೆ ಪರಿಚಯಿಸುವ ಸಲುವಾಗಿ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಹೃದಯಭಾಗದಲ್ಲಿರುವ ಶ್ರೀ ಸದ್ವಿದ್ಯಾ ಪರಿಕಲ್ಪನಾ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸುಗ್ಗಿ ಹಬ್ಬದ ಸಂಭ್ರಮ ನೋಡುಗರ ಗಮನ ಸೆಳೆಯಿತು.

ತಾಲ್ಲೂಕಿನ ನರುಗನಹಳ್ಳಿ ಸಮೀಪದ ಹೊನ್ನುಡಿಕೆ ರಸ್ತೆಯಲ್ಲಿರುವ ಶ್ರೀ ಸದ್ವಿದ್ಯಾ ಪರಿಕಲ್ಪನಾ ಶಾಲೆಯಲ್ಲಿ ಮಕರ ಸಂಕ್ರಾಂತಿ ಹಬ್ಬದ ಬಳಿಕ ಮಕ್ಕಳಿಗೆ ನಮ್ಮ ಹಳ್ಳಿಗಾಡಿನ ಸೊಗಡಿನ ಸಂಸ್ಕೃತಿಯ ಬಗ್ಗೆ ಪರಿಚಯಿಸಲು ಸುಗ್ಗಿ ಹಬ್ಬವನ್ನು ಏರ್ಪಡಿಸಿ ಶಾಲಾ ಆವರಣದಲ್ಲಿ ಸಿರಿಧಾನ್ಯಗಳ ರಾಶಿ, ಭತ್ತದ ರಾಶಿ, ಗೆಣಸು, ಆವರೆಕಾಯಿ, ಕಡಲೆಕಾಯಿ ರಾಶಿಯನ್ನು ನಿರ್ಮಿಸುವ ಮೂಲಕ ಹಳ್ಳಿಯ ವಾತಾವರಣವನ್ನೇ ಸೃಷ್ಟಿಸಲಾಗಿತ್ತು.

ರೈತರು 6 ತಿಂಗಳ ಕಾಲ ಕಷ್ಟಪಟ್ಟು ಬೆಳೆದ ರಾಗಿ, ಭತ್ತ ಸೇರಿದಂತೆ ಇತರೆ ಬೆಳೆಗಳನ್ನು ಒಕ್ಕಣೆ ಮಾಡಲು ನಿರ್ಮಿಸುವ ಕಣ, ಎತ್ತಿನ ಗಾಡಿ, ಕಣದಲ್ಲಿ ರೈತರು ರಾತ್ರಿ ವೇಳೆ ತಂಗಲು ನಿರ್ಮಿಸುವ ಗುಡಿಸಲು, ಧಾನ್ಯಗಳ ರಾಶಿ ನಿರ್ಮಿಸುವ ಮೂಲಕ ಇಡೀ ಗ್ರಾಮೀಣ ಸೊಗಡಿನ ಸಂಸ್ಕೃತಿಯನ್ನು ಶಾಲಾ ಮಕ್ಕಳಿಗೆ ಪರಿಚಯಿಸಲಾಯಿತು. ಸುಗ್ಗಿಹಬ್ಬದ ಆಚರಣೆಯ ಭಾಗವಾಗಿ ಹಾಕಿದ್ದ ರಾಗಿ, ಭತ್ತ, ಸಿರಿಧಾನ್ಯದ ರಾಶಿ ಹಾಗೂ ಹಸುಗಳಿಗೆ ಪೂಜೆ ಸಲ್ಲಿಸಿದ್ದು ವಿಶೇಷವಾಗಿತ್ತು.

ಈ ಸುಗ್ಗಿ ಹಬ್ಬದ ಸಂಭ್ರಮದಲ್ಲಿ ಒಂದು ಜತೆ ಹಸುಗಳು ಹಾಗೂ ಎತ್ತಿನ ಗಾಡಿಯನ್ನು ಸಹ ಪ್ರದರ್ಶನಕ್ಕಿಟ್ಟು ಈ ಪೀಳಿಗೆಯ ಮಕ್ಕಳಿಗೆ ಕೃಷಿ ಸಂಸ್ಕೃತಿಯನ್ನು ಮನವರಿಕೆ ಮಾಡಿಕೊಡಲಾಯಿತು.

ಶ್ರೀ ಸದ್ವಿದ್ಯಾ ಪರಿಕಲ್ಪನಾ ಶಾಲೆಯ ಪ್ರಾಂಶುಪಾಲರಾದ ಆರ್. ರಂಗಸ್ವಾಮಿ, ಮುಖ್ಯೋಪಾಧ್ಯಾಯರಾದ ಸೌಮ್ಯ ಅವರ ನೇತೃತ್ವದಲ್ಲಿ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿಗಳು ಮಕ್ಕಳಿಗೆ ಗ್ರಾಮೀಣ ಸಂಸ್ಕೃತಿ ಮತ್ತು ಸೊಗಡನ್ನು ಸಾರಲು ಹಮ್ಮಿಕೊಂಡಿದ್ದ ಸುಗ್ಗಿಹಬ್ಬ ಆಚರಣೆಯಲ್ಲಿ ಶಾಲಾ ಆವರಣವನ್ನು ಗ್ರಾಮೀಣ ಸಂಸ್ಕೃತಿಗೆ ತಕ್ಕಂತೆ ವಿಶೇಷವಾಗಿ ಸಿಂಗರಿಸಲಾಗಿತ್ತು. ಶಾಲಾ ಆವರಣಕ್ಕೆ ಹೋದರೆ ಹಳ್ಳಿಯ ವಾತಾವರಣವೇ ಸೃಷ್ಟಿಯಾದಂತೆ ಭಾಸವಾಗುತ್ತಿತ್ತು.

ಈ ಸುಗ್ಗಿ ಹಬ್ಬ ಸಂಭ್ರಮದಲ್ಲಿ ರೈತರು ಬೇಸಾಯ ಮಾಡಲು ಬಳಸುವ ನೇಗಿಲು, ನೊಗ, ರಾಗಿ ಬಿತ್ತನೆಗೆ ಬಳಸುವ ಕೂರಿಗೆ, ರಾಗಿ ಒಕ್ಕಣೆ ಕಣದಲ್ಲಿ ಬಳಸುವ ಮಂಕರಿ, ರಾಗಿ ತೂರಲು ಉಪಯೋಗಿಸುವ ಕುದುರೆ ಮಣೆ, ಮೊರಗಳು, ಮೆರಗೋಲು, ಎತ್ತಿನಗಾಡಿ, ಹಸುಗಳ ಪ್ರದರ್ಶನ ಹಾಗೂ ಚಿತ್ತಾಕರ್ಷಕ ರಂಗೋಲಿಗಳು ನೋಡುಗರ ಗಮನ ಸೆಳೆದವು.

ಸುಗ್ಗಿ ಹಬ್ಬದ ಆಚರಣೆಯಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿಗಳು, ಚಾಲಕರು ಹಾಗೂ ಮಕ್ಕಳು ಬಣ್ಣ ಬಣ್ಣದ

# ಶಿವಲೋಕದಲ್ಲಿ ಮಹಾನಾಯಕರಿಬ್ಬರ ಮಹಾಸಂಗಮ!!

ಶಿವಲೋಕದಲ್ಲಿ ವೀರಶೈವ–ಲಿಂಗಾಯತ
ಮಹಾನಾಯಕರಿಬ್ಬರ ಮಹಾಸಂಗಮ!!
ಶಿವಲೋಕದಲ್ಲಿ ಶಿವನ ಸನ್ನಿಧಾನದಲ್ಲಿ
ವೀರಶೈವ–ಲಿಂಗಾಯತ
ಮಹಾನಾಯಕರಿಬ್ಬರ ಮಕರಸಂಕ್ರಾಂತಿ!!
ಒಂದೇ ತಿಂಗಳಿನ ಅಂತರದಲ್ಲಿ
ಅಖಿಲ ಭಾರತ ವೀರಶೈವ–ಲಿಂಗಾಯತ
ಮಹಾಸಭೆಯ
ಮತ್ತೊಂದು ದೊಡ್ಡ ಕಂಬ ಉರುಳಿತು.
ಶ್ರೀ ಶಾಮನೂರು ಶಿವಶಂಕ್ರಪ್ಪನವರ
ನಂತರ
ಸದ್ಯ ಶ್ರೀ ಭೀಮಣ್ಣ ಖಂಡ್ರೆಯವರು!!
ಶ್ರೀ ಶಾಮನೂರು ಶಿವಶಂಕ್ರಪ್ಪನವರು 14. 12. 2025
ಶ್ರೀ ಭೀಮಣ್ಣ ಖಂಡ್ರೆಯವರು – 16. 01. 2026
ವೀರಶೈವ–ಲಿಂಗಾಯತರು
ಮೊದಲ ಆಘಾತದಿಂದ
ಚೇತರಿಸಿಕೊಳ್ಳುವುದಕ್ಕೆ ಮುನ್ನವೇ
ಇನ್ನೊಂದು ಆಘಾತಕ್ಕೆ ಗುರಿಯಾಗಬೇಕಾಗಿದೆ.
ಶ್ರೀ ಶಾಮನೂರು ಶಿವಶಂಕ್ರಪ್ಪನವರ ನಂತರ
ಇದೀಗ ಶ್ರೀ ಭೀಮಣ್ಣ ಖಂಡ್ರೆಯವರು!!
ಶಾಮನೂರುರವರು





ದೇಹಬಿಟ್ಟಾಗ ಅವರಿಗೆ 94.
ಭೀಮಣ್ಣ ಖಂಡ್ರೆಯವರು
ದೇಹವನ್ನು ವಿಸರ್ಜಿಸಿದಾಗ ಅವರಿಗೆ 101.
ಭೀಮಣ್ಣ ಖಂಡ್ರೆಯವರು ಶತಾಯುಷಿಗಳು!!
ವೀರಶೈವ–ಲಿಂಗಾಯತರ
ಮತ್ತೊಬ್ಬ ಮಹಾನಾಯಕ ದಿವಂಗತ!!
"ದಿವಂಗತ" ಎಂದು ಹೇಳುವುದಕ್ಕಿಂತ
"ಲಿಂಗಾಂತರ್ಗತ" ಅಂದರೆ "ಲಿಂಗೈಕ್ಯ".
ಭೀಮಣ್ಣ ಖಂಡ್ರೆಯವರದು ಧರ್ಮಕ್ಷೇತ್ರಕ್ಕೂ ಸೈ,
ಕುರುಕ್ಷೇತ್ರಕ್ಕೂ ಸೈ – ಎನ್ನುವಂತಿದ್ದ ವ್ಯಕ್ತಿತ್ವ!!
ಅವರು ಅಖಿಲ ಭಾರತ
ವೀರಶೈವ–ಲಿಂಗಾಯತ ಮಹಾಸಭೆ ಎಂಬ
ಧರ್ಮಕ್ಷೇತ್ರವನ್ನು ಯಶಸ್ವಿಯಾಗಿ ನಿಭಾಯಿಸಿದರು.
ಹಾಗೇನೇ ಅವರು ರಾಜಕಾರಣದ
ಕುರುಕ್ಷೇತ್ರದಲ್ಲೂ ಯಶಸ್ಸು ಕಂಡವರು.
ಈ ನಾಡಿನ ಸಾರಿಗೆ ಮಂತ್ರಿಗಳಾಗಿ
(1992–1994) ಸೇವೆ ಸಲ್ಲಿಸಿದ
ಅವರ ಸೇವೆ ಅವಿಸ್ಮರಣೀಯ.
ಭೀಮಣ್ಣ ಖಂಡ್ರೆಯವರು
ಹುಟ್ಟಿದ್ದು – 1 ನವ್ವೆಂಬರ್ 1925
ಮತ್ತೆ ಭಗವಂತನನ್ನು ಸೇರಿದ್ದು – 16. 01. 2026
ಉತ್ತರ ಕರ್ನಾಟಕದ ಗಟ್ಟಿ ಜೀವ ಅವರದು.
ಬಿಸಿಲನಾಡಿನಲ್ಲಿ ಹುಟ್ಟಿ ಬೆಳೆದ ಅವರು
ಜನರ ಪಾಲಿಗೆ ಬಿಸಿಲುಗುದುರೆಯಾಗಿರದೆ
ಓಯಾಸಿಸ್‌ನಂತಿದ್ದರು,
ಗುರು–ವಿರಕ್ತರ ಮಧ್ಯದಲ್ಲಿ ಬೆಸುಗೆಹಾಕಲು
ಅವರು ಮಾಡಿದ ಪ್ರಯತ್ನವದು
ತ್ರಿಕಾಲಸ್ಮರಣೀಯ.
ಧರ್ಮಕಾರಣ ಮತ್ತು ರಾಜಕಾರಣ –
ಈ ಎರಡನ್ನೂ ಯಶಸ್ವಿಯಾಗಿ
ನಿಭಾಯಿಸಿದ ಭೀಮಣ್ಣ ಖಂಡ್ರೆಯವರು
ಓರ್ವ ಅಪ್ಪಟ ದೈವಭಕ್ತ ಮತ್ತು ಗುರುಭಕ್ತ.
ಅವರು ಉತ್ತರ ಕರ್ನಾಟಕದ
ಅತ್ಯಂತ ಎತ್ತರದ ಧ್ವನಿಯಾಗಿದ್ದರು.
ಬೀದರ್–ಭಾಲ್ಕಿ ಎಂದರಾಯಿತು –
ಭೀಮಣ್ಣ ಖಂಡ್ರೆ ಎಂದೇ ಅರ್ಥ!!
ಅಂಥೊಬ್ಬ ಮಹಾನುಭಾವ ಇಂದು
ನಿಯತಿಯ ನೀತಿಗೆ ಎದುರಾಡದೆ
ಶಿವನ ಪಾದ ಸೇರಿದ್ದಾರೆ.
ಇದರಿಂದ ಬರೀ ಅವರ ಪುತ್ರ, ಪೌತ್ರ,
ಬಂಧು, ಬಳಗ,
ಕುಟುಂಬ ಪರಿವಾರವಷ್ಟೇ ಅಲ್ಲ,
ಅವರ ಕೋಟ್ಯಂತರ ಅಭಿಮಾನಿಗಳು ನೊಂದಿದ್ದಾರೆ.
ಅವರಿಗೆ ಅತೀವ ದುಃಖವಾಗಿದೆ.
ಆದರೂ ಸಹ ಇದು ಅಳುತ್ತ
ಕುಳಿತುಕೊಳ್ಳುವ ಸಮಯವಲ್ಲ.
ಏಕೆಂದರೆ ವೀರಶೈವ–ಲಿಂಗಾಯತರಿಗೆ
ಯಾವ ರೀತಿ ದಯವೇ ಧರ್ಮದ ಮೂಲವೋ
ಯಾವ ರೀತಿ ಕಾಯಕವೇ ಕೈಲಾಸವೋ
ಅದೇ ರೀತಿ ಮರಣವೇ ಮಹಾನವಮಿ!!
ನಾವು ಐಹಿಕದಿಂದ ಬಿಡುಗಡೆಗೊಂಡು
ದೈವಿಕವಾದ ಭೀಮಣ್ಣ ಖಂಡ್ರೆಯವರ
ಆತ್ಮಕ್ಕೆ ಶಾಂತಿಯನ್ನು ಕೋರಿ
ಅವರಿಗೆ ನುಡಿಶ್ರದ್ಧಾಂಜಲಿಯನ್ನು
ಸಮರ್ಪಿಸುವಾ.
ತಮ್ಮ ತಂದೆ ಶ್ರೀ ಭೀಮಣ್ಣ ಖಂಡ್ರೆಯವರ
ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು
ತಮ್ಮ ತಂದೆಯವರ ಹಾಗೆ
ಧರ್ಮಕಾರಣ ಮತ್ತು ರಾಜಕಾರಣವನ್ನು
ಯಶಸ್ವಿಯಾಗಿ ನಿಭಾಯಿಸಿಕೊಂಡು ಹೋಗುತ್ತಿರುವ
ಅವರ ಪುತ್ರ ಸಚಿವ ಶ್ರೀ ಈಶ್ವರ ಖಂಡ್ರೆ
ಮತ್ತು
ಅವರ ಮೊಮ್ಮಗ ಸಂಸದ ಸಾಗರ ಖಂಡ್ರೆ,
ಮತ್ತವರ ಕುಟುಂಬಕ್ಕೆ
ಈ ಒಂದು ದುಃಖದ ಸಮಯದಲ್ಲಿ
ನಾವೆಲ್ಲ ನಿಮ್ಮ ಜೊತೆಗಿದ್ದೇವೆ ಎಂದು ಹೇಳುವಾ.
ಅವರ ಶೋಕದಲ್ಲಿ ಭಾಗಿಯಾಗುವ ಮೂಲಕ
ಅವರಲ್ಲಿ ಧೈರ್ಯ ತುಂಬುವಾ
ಭೀಮಣ್ಣ ಖಂಡ್ರೆಯವರು ಇನ್ನು ಮುಂದೆ
ಅವರು ದೇಹವಲ್ಲ; ಅವರು ದೈವ!!

ಡಾ. ಶಿವಾನಂದ ಶಿವಾಚಾರ್ಯ ಶ್ರೀಗಳು
ಸುಕ್ಷೇತ್ರ ಹಿರೇಮಠ, ತಪೋವನ, ತುಮಕೂರು

# ಎರಡು ಯೋನಿ ಹಾಗೂ ಎರಡು ಗರ್ಭ ಹೊಂದಿದ್ದ ಮಹಿಳೆ

## ವೈದ್ಯಕೀಯ ಕ್ಷೇತ್ರದಲ್ಲೇ ಅಪರೂಪದ ಶಸ್ತ್ರಚಿಕಿತ್ಸೆ

ಓರ್ವ ಮಹಿಳೆಗೆ ಎರಡು ಯೋನಿ ಹಾಗೂ ಎರಡು ಗರ್ಭ ಹೊಂದಿರುವ ಬಗ್ಗೆ ನೀವು ಕೇಳಿದ್ದೀರಾ? ಲಕ್ನೋದಲ್ಲಿ ನಡೆದ ಅಪರೂಪದ ವೈದ್ಯಕೀಯ ಪ್ರಕರಣವೊಂದು ಎಲ್ಲರನ್ನೂ ಬೆಚ್ಚಿಬೀಳಿಸಿದೆ. ಎರಡು ಗರ್ಭಾಶಯಗಳು ಮತ್ತು ಎರಡು ಯೋನಿ ಹೊಂದಿದ್ದ ಯುವತಿಯೊಬ್ಬಳಿಗೆ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ. ಈ ಜನ್ಮಜಾತ ಸ್ಥಿತಿಯು ಬಾಲ್ಯದಿಂದಲೂ ಅವಳ ಜೀವನವನ್ನು ಅಡ್ಡಿಪಡಿಸುತ್ತಿತ್ತು.

**ಮೂತ್ರ ವಿಸರ್ಜನೆಗೆ ನಿಯಂತ್ರಣವಿರಲಿಲ್ಲ**

ಬಲ್ಲಿಯಾ ಜಿಲ್ಲೆಯ ನಿವಾಸಿಯಾದ ಯುವತಿಗೆ ಬಾಲ್ಯದಿಂದಲೂ ಮೂತ್ರ ವಿಸರ್ಜನೆಯ ಮೇಲೆ ಯಾವುದೇ ನಿಯಂತ್ರಣವಿರಲಿಲ್ಲ. ಅವಳು ಹಲವಾರು ವರ್ಷಗಳಿಂದ ಡೈಪರ್‌ಗಳನ್ನು ಅವಲಂಬಿಸಿದ್ದಳು. ಇದಲ್ಲದೆ ಅವಳು ಗಂಭೀರ ಮಲವಿಸರ್ಜನೆ ಸಮಸ್ಯೆಗಳನ್ನು ಎದುರಿಸುತ್ತಿದ್ದಳು, ಇದು ಆಕೆಯ ದೈನಂದಿನ ಮತ್ತು ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರುತ್ತಿತ್ತು.
ಮೂರು ಗಂಭೀರ ಜನ್ಮಜಾತ ದೋಷಗಳು
ಕುಟುಂಬವು ವರ್ಷಗಳ ಕಾಲ ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೂ ಯಾವುದೇ ಶಾಶ್ವತ ಪರಿಹಾರವನ್ನು ಸಿಗಲಿಲ್ಲ. ಅಂತಿಮವಾಗಿ ಆಕೆಯನ್ನು ಲಕ್ನೋದ ಡಾ. ರಾಮ್ ಮನೋಹರ್ ಲೋಹಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ಗೆ ದಾಖಲಿಸಲಾಯಿತು. ಅಲ್ಲಿ ವೈದ್ಯರು ವಿವರವಾದ ಪರೀಕ್ಷೆಯನ್ನು ಪ್ರಾರಂಭಿಸಿದರು.
ವೈದ್ಯಕೀಯ ಪರೀಕ್ಷೆಯಲ್ಲಿ ಮೂರು ಗಂಭೀರ ಜನ್ಮಜಾತ



ದೋಷಗಳು ಕಂಡುಬಂದವು. ಎರಡು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ಗರ್ಭಾಶಯಗಳು ಮತ್ತು ಎರಡು ಯೋನಿಗಳಿವೆ ಎಂದು ವೈದ್ಯರು ಕಂಡುಕೊಂಡರು. ಹೆಚ್ಚುವರಿಯಾಗಿ, ಮೂತ್ರನಾಳವು ತಪ್ಪಾದ ಸ್ಥಳದಲ್ಲಿ ತೆರೆದುಕೊಳ್ಳುತ್ತಿದ್ದು, ನಿರಂತರ ಮೂತ್ರ ಸೋರಿಕೆಗೆ ಕಾರಣವಾಗುತ್ತಿತು. ಗುದದ್ವಾರವು ಅಸಹಜವಾಗಿ ಅಭಿವೃದ್ಧಿ ಹೊಂದಿದ್ದು ಯೋನಿಯ ಹತ್ತಿರದಲ್ಲಿತ್ತು.

**ವೈದ್ಯರ ತಂಡವು ಮೂರು ಹಂತದ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು**

ಮೂತ್ರಶಾಸ್ತ್ರ ತಜ್ಞ ಪ್ರೊಫೆಸರ್ ಈಶ್ವರ್ ರಾಮ್ ಧಯ್ಯಲ್ ನೇತೃತ್ವದ ವೈದ್ಯರ ತಂಡವು ಪ್ರಕರಣವನ್ನು ನಿರ್ವಹಿಸಿತು. ಪರಿಸ್ಥಿತಿಯ ಸಂಕೀರ್ಣತೆಯನ್ನು ಗಮನದಲ್ಲಿಟ್ಟುಕೊಂಡು, ಶಸ್ತ್ರಚಿಕಿತ್ಸೆಯನ್ನು ಮೂರು ಹಂತಗಳಲ್ಲಿ ಮಾಡಲು ನಿರ್ಧರಿಸಲಾಯಿತು. ಮೊದಲ ಹಂತದಲ್ಲಿ ಕರುಳಿನ ಸಮಸ್ಯೆಗಳನ್ನು ನಿವಾರಿಸಲು ಗುದನಾಳವನ್ನು ಸರಿಪಡಿಸಿದರು.
ಇದರ ನಂತರ, ಎರಡು ಪ್ರತ್ಯೇಕ ಶಸ್ತ್ರಚಿಕಿತ್ಸೆಗಳು ಮೂತ್ರನಾಳದ ತಪ್ಪಾದ ಸ್ಥಾನವನ್ನು ಸರಿಪಡಿಸಿದವು. ಈ ಶಸ್ತ್ರಚಿಕಿತ್ಸೆಗಳು ಅತ್ಯಂತ ಸವಾಲಿನದ್ದಾಗಿದ್ದವು, ಆದರೆ ವೈದ್ಯರ ಆರೈಕೆ ಮತ್ತು ಅನುಭವದಿಂದ ಎಲ್ಲಾ ಹಂತಗಳು ಯಶಸ್ವಿಯಾಗಿವೆ.
ವೈದ್ಯಕೀಯವಾಗಿ ಸವಾಲಿನದ್ದಾಗಿತ್ತು
ವೈದ್ಯಕೀಯವಾಗಿ ಸವಾಲಿನದ್ದಾಗಿತ್ತು
ಪ್ರೊಫೆಸರ್ ಧಯಾಲ್ ಪ್ರಕಾರ, ಎಲ್ಲಾ ಮೂರು ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿವೆ. ಮಹಿಳೆ ಈಗ ಮೂತ್ರ ವಿಸರ್ಜನೆಯ ಮೇಲೆ ನಿಯಂತ್ರಣ ಹೊಂದಿದ್ದಾಳೆ ಮತ್ತು ಆಕೆಯ ಕರುಳಿನ ಸಂಬಂಧಿತ ಸಮಸ್ಯೆಗಳು ಹೆಚ್ಚಾಗಿ ಪರಿಹರಿಸಲ್ಪಟ್ಟಿವೆ. ಈ ವಿಧಾನವು ವೈದ್ಯಕೀಯವಾಗಿ ಸವಾಲಿನದ್ದಾಗಿತ್ತು ಮತ್ತು ರೋಗಿಗೆ ಜೀವನವನ್ನು ಬದಲಾಯಿಸಿತು ಎಂದು ವೈದ್ಯರು ಹೇಳುತ್ತಾರೆ.
ಮೇಯೊ ಕ್ಲಿನಿಕ್ ಮತ್ತು ಇತರ ವೈದ್ಯಕೀಯ ವರದಿಗಳ ಪ್ರಕಾರ, ಈ ಸ್ಥಿತಿಯು ಬಹಳ ಅಪರೂಪ ಮತ್ತು ಹುಟ್ಟಿನಿಂದಲೇ ಇರುತ್ತದೆ. ಅನೇಕ ಮಹಿಳೆಯರು ಇದರೊಂದಿಗೆ ಸಾಮಾನ್ಯ ಜೀವನವನ್ನು ನಡೆಸುತ್ತಾರೆ. ಇಂತಹ ಕೆಲವು ಪ್ರಕರಣಗಳು ಬೇರೆ ಬೇರೆ ದೇಶಗಳಲ್ಲಿ ಬೆಳಕಿಗೆ ಬಂದಿತ್ತು.

ರಜತಾ

# ಬೇಸಿಗೆಗೂ ಮುನ್ನವೇ ಕರ್ನಾಟಕ ಸೇರಿ ಹಿಮಾಲಯದ ತಪ್ಪಲಿನಲ್ಲಿ ಕಾಡ್ಗಿಚ್ಚು;

ಕರ್ನಾಟಕ ಮತ್ತು ಹಿಮಾಲಯದ ತಪ್ಪಲಿನಲ್ಲಿ ಒಣಹವೆಯಿಂದಾಗಿ ಇತ್ತೀಚೆಗೆ ಕಾಡ್ಗಿಚ್ಚಿನ ಸಂಖ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ಮಾನವನ ಹಸ್ತಕ್ಷೇಪ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ಈ ಅವಘಡ ಸಂಭವಿಸುತ್ತಿದೆ. ಈಹಿಂದೆ ಗ್ರಾಮಸ್ಥರು ಒಣ ಹುಲ್ಲು ಮೇಯಿಸುವ ಕೆಲಸ ಮಾಡುತ್ತಿದ್ದರು. ಆದರೆ, ಈ ಗ ಬದಲಾದ ಜೀವನ ಶೈಲಿಯಿಂದ ಪರಿಸ್ಥಿತಿ ಬಿಗಡಾಯಿಸಿದೆ. ಅಷ್ಟೇ ಅಲ್ಲದೆ, ಒಣ ಹುಲ್ಲಿಗೆ ಜನರು ಬೆಂಕಿ ಹಾಕುವ ಕಾರಣದಿಂದಲೂ ಈ ಪರಿಸ್ಥಿತಿ ಬಂದೊದಗಿದೆ ಎನ್ನಲಾಗುತ್ತಿದೆ.
ಚಳಿಗಾಲದಲ್ಲಿ ಎಲೆಗಳೆಲ್ಲ ಉದುರುವ ಸಮಯವಿದು. ಏಪ್ರಿಲ್ ಮತ್ತು ಮಾರ್ಚ್ ಮಾಸದಲ್ಲಿ ಸಾಮಾನ್ಯವಾಗಿ, ಮಳೆಗಾಲ ಮುಗಿದು, ಭೂಮಿ ಮತ್ತು ಗಿಡಗಂಟಿಗಳು ಒಣಗಿದ ನಂತರ ಕಾಡ್ಗಿಚ್ಚು ಸಂಭವಿಸುತ್ತದೆ. ಆದರೆ, ಅದಕ್ಕೂ ಮುನ್ನವೇ ಹಿಮಾಲಯ, ಜಮ್ಮು–ಕಾಶ್ಮೀರ ಹಾಗೂ ಉತ್ತರಾಖಂಡ ಹಾಗೂ ಚಾರ್ಮಡಿ ಘಾಟ್‌ನಲ್ಲಿ ಕಾಡ್ಗಿಚ್ಚು ಸಂಭವಿದೆ. ತಜ್ಞರು ಹವಾಮಾನ ವೈಪರೀತ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಜೊತೆಗೆ ಇದಕ್ಕೆ ಕಾರಣವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.
**ಹಿಮಾಲಯದ ತಪ್ಪಲಿನಲ್ಲಿ ಕಾಡ್ಗಿಚ್ಚಿನ ಸ್ವರೂಪ** ಸಂಪೂರ್ಣವಾಗಿ ಬದಲಾಗುತ್ತಿದೆ. ಹಿಂದೆ ಬೇಸಿಗೆಯ ಆರಂಭದಲ್ಲಿ ಒಣ ಎಲೆಗಳು ಮತ್ತು ಬಿಸಿ ಗಾಳಿಯಿಂದಾಗಿ ಆರಂಭವಾಗುತ್ತಿದ್ದ ಕಾಡ್ಗಿಚ್ಚು, ಈಗ ಚಳಿಗಾಲದ ಅವಧಿಯಲ್ಲೂ ತೀವ್ರವಾಗಿ ಹರಡುತ್ತಿದೆ. ಹವಾಮಾನ ವೈಪರೀತ್ಯವು ಅರಣ್ಯದ ನೈಸರ್ಗಿಕ ಚಕ್ರವನ್ನು ಏರುಪೇರು ಮಾಡಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.
(**ಚಿಲಿಯಲ್ಲಿ ಕಾಡ್ಗಿಚ್ಚು ಹಲವು ಸಾವು ನೋವು**)

**ಬೇಸಿಗೆಗೂ ಮುನ್ನವೇ ಕಾಡ್ಗಿಚ್ಚು**

ಹವಾಮಾನ ವೈಪರೀತ್ಯದಿಂದಾಗಿ ದಟ್ಟಾರಣ್ಯಗಳ ಮೇಲಾಗುತ್ತಿರುವ ಬದಲಾವಣೆ ಬಗ್ಗೆ ಹಾಗೂ ಈ



ಬಾರಿ ಎಲ್ಲೆಲ್ಲಿ ಕಾಡ್ಗಿಚ್ಚು ಸಂಭವಿಸಿತ್ತು ಎಂದು 'ಫಾರೆಸ್ಟ್ ಸರ್ವೆ ಆಫ್ ಇಂಡಿಯಾ' ಸರ್ವೆ ನಡೆಸಿ ವರದಿ ಮಾಡಿದೆ. ಅದರ ಪ್ರಕಾರ ಇಲ್ಲಿಯವರೆಗೂ ಚಳಿಗಾಲದಲ್ಲಿ ಅತಿ ಹೆಚ್ಚು ಕಾಡ್ಗಿಚ್ಚು ಸಮಸ್ಯೆ ಎದುರಿಸಿದ ಪ್ರದೇಶದವೆಂದರೆ ಅದು ಉತ್ತರಾಖಂಡ ಇಲ್ಲಿ 1,756 ಬಾರಿ ಕಾಡ್ಗಿಚ್ಚು ಅಲರ್ಟ್ ಬಂದಿರುವುದಾಗಿ ದಾಖಲಾಗಿದೆ. ಇನ್ನು 1,028 ಬಾರಿ ಮಹಾರಾಷ್ಟ್ರದಲ್ಲಾದರೆ, ಕರ್ನಾಟಕದಲ್ಲಿ 924 ಬಾರಿ ಎಚ್ಚರಿಕೆ ಸಿಕ್ಕಿದೆ.
ಇಷ್ಟೇ ಅಲ್ಲದೆ ಮಧ್ಯಪ್ರದೇಶದಿಂದ 868 ಬಾರಿ ಕಾಡ್ಗಿಚ್ಚು ಅಲರ್ಟ್ ಸಂದೇಶ ಸಿಕ್ಕಿದೆ. ಜೊತೆಗೆ 862 ಭಾರಿ ಛತ್ತೀಸ್‌ಗಢದಿಂದ ಅಲರ್ಟ್ ಮಾಹಿತಿ ಬಂದಿದೆ ಎಂದು ಹೇಳಲಾಗುತ್ತಿದೆ. ಡಿಸೆಂಬರ್ ತಿಂಗಳು ಸಾಮಾನ್ಯವಾಗಿ ಕಾಡ್ಗಿಚ್ಚು ಕಡಿಮೆ ಇರುವ ಸಮಯ, ಆದರೆ ಈ ಬಾರಿ ಕಳೆದ ಮೂರು ವರ್ಷಗಳಲ್ಲಿ ಅತಿ ಹೆಚ್ಚು ಬೆಂಕಿ ಅವಘಡಗಳು ಸಂಭವಿಸಿದ ತಿಂಗಳಾಗಿ ಹೊರಹೊಮ್ಮಿದೆ.

**ಮಳೆಯಿಲ್ಲ, ಹಿಮವಿಲ್ಲ ಬೆಂಕಿ ಅವಘಡಕ್ಕೇ ಇದೇ ಕಾರಣನಾ?**

ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಅಕ್ಟೋಬರ್‌ನಿಂದ ಮಳೆಯಾಗಿಲ್ಲ. ಈ ಮಾಸದಲ್ಲಿ ಕುಲ್ಲು, ಮಂಡಿ, ಶಿಮ್ಲಾ ಸೇರಿ ಹಲವು ಕಡೆ ಹಿಮಪಾತವಾಗುತ್ತದೆ. ಆದರೆ, ಈ ಬಾರಿ ಸೇಬು ಬೆಳೆಯುವ ಪ್ರದೇಶಗಳಲ್ಲಿ ಹಿಮಪಾತವಾಗುವುದು ಸಹ ಸಂಪೂರ್ಣ ಸ್ಥಗಿತಗೊಂಡಿದೆ. ಮಣ್ಣಿನಲ್ಲಿ ತೇವಾಂಶ ಇಲ್ಲದಿರುವುದರಿಂದ ಸಣ್ಣ ಕಿಡಿ ಕೂಡ ದೊಡ್ಡ ಪ್ರಮಾಣದ ಬೆಂಕಿಯಾಗಿ ಮಾರ್ಪಡುತ್ತಿದೆ. ಕಾಶ್ಮೀರದಲ್ಲಿ ಸತತ ಮೂರು ವರ್ಷಗಳಿಂದ ಒಣ ಚಳಿಗಾಲ ಕಂಡುಬರುತ್ತಿದ್ದು, ಶೇ.40 ರಷ್ಟು ಹಿಮದ ಕೊರತೆಯಿದೆ.
ಪ್ರಕೃತಿ ಮೇಲಿನ ಮಾನವನ ಹಿಡಿತದಿಂದಲೂ ಬೆಂಕಿ ಕಿಚ್ಚು ಕಾಡ್ಗಿಚ್ಚಿಗೆ ಒಣ ಹವೆ ಮಾತ್ರ ಅಲ್ಲದೆ, ಪರಿಸರದ ಮೇಲಾಗುತ್ತಿರುವ ಮಾರಣ ಹೋಮದಿಂದಾಗಿ ಹಾಗೂ ಈ ಹಿಂದೆ ಗ್ರಾಮಸ್ಥರು ಕಾಡಿನ ಒಣ ಹುಲ್ಲನ್ನು ನಿಯಮಿತವಾಗಿ ಸ್ವಚ್ಛಗೊಳಿಸುತ್ತಿದ್ದರು. ಇಲ್ಲದಿದ್ದರೆ ಜಾನುವಾರುಗಳನ್ನು ಕರೆತಂದು ಮೇಯಲು ಬಿಡುತ್ತಿದ್ದರು. ಆದರೆ, ಪರಿಸ್ಥಿತಿ ಈಗ ಹಾಗಿಲ್ಲ. ಈಗ ವಲಸೆ ಪದ್ಧತಿಯಿಂದ ಹಾಗೂ ಕಾಡು ಪ್ರಾಣಿಗಳ ಭಯದಿಂದ, ಬದಲಾದ ಜೀವನಶೈಲಿಯಿಂದಾಗಿ ಕಾಡಿನಲ್ಲಿ ಒಣ ಕಸದ ರಾಶಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆ ಕಾಡ್ಗಿಚ್ಚು ಹೆಚ್ಚಾಗಿದೆ ಎಂದರು.
ಕಸ್ತೂರಿ ಮೃಗ ಸೆರೆಹಿಡಿಯಲು ಬೇಟೆಗಾರರು ಕಾಡಿಗೆ ಬೆಂಕಿ ಹಚ್ಚುವುದು ಹಾಗೂ ಅರಣ್ಯದ ಅಂಚಿನಲ್ಲಿರುವ ಹೊಲಗಳಲ್ಲಿ ಕಳೆ ಸುಡುವುದು ಮತ್ತು ಹೊಸ ಹುಲ್ಲು ಬೆಳೆಯಲಿ ಎಂದು ಕಾಡಿನ ಮೇಲ್ಮೈಗೆ ಬೆಂಕಿ ಕೊಡುವುದು ಕೂಡ ಈ ಅವಘಡಕ್ಕೆ ಕಾರಣ ಎನ್ನಲಾಗಿದೆ.

ಮಮತ.ಜಿ

# ಜನವರಿ 19: ಕಾಶ್ಮೀರಿ ಹಿಂದೂಗಳ ಸ್ಥಳಾಂತರದ ಭೀಕರ ಸತ್ಯ ಮತ್ತು 36 ವರ್ಷಗಳ ಅಖಂಡ ವೇದನೆ !

## ಕಾಶ್ಮೀರದಲ್ಲಿ ಜಿಹಾದಿ ದೌರ್ಜನ್ಯಗಳು ಮತ್ತು ಹಿಂದೂಗಳ ವಂಶಹತ್ಯೆಯ ಜ್ವಲಂತ ಸತ್ಯ

ಜನವರಿ 19, 1990 ! ಈ ವರ್ಷ ಮತ್ತು ಈ ದಿನವನ್ನು ನೆನಪಿಸಿಕೊಂಡರೆ ಇಂದಿಗೂ ಪ್ರ ತಿಯೊಬ್ಬ ಕಾಶ್ಮೀರಿ ಹಿಂದೂ ನಡುಗುತ್ತಾನೆ. ಭೂಮಿಯ ಸ್ವರ್ಗ ಎಂದು ಕರೆಯಲ್ಪಡುವ ಕಾಶ್ಮೀರದಲ್ಲಿ ಅಂದು ಮಾನವೀಯತೆಯೇ ನಾಚಿಕೆಪಡುವಂತಹ ಘಟನೆ ನಡೆದಿತ್ತು. 5 ಸಾವಿರ ವರ್ಷಗಳಷ್ಟು ಹಳೆಯದಾದ ಕಾಶ್ಮೀರದ ಸಮೃದ್ಧ ಮತ್ತು ಪುರಾತನ ಸಂಸ್ಕೃತಿಯನ್ನು ನಾಶಮಾಡಲು ಮತಾಂಧ ಜಿಹಾದಿ ಶಕ್ತಿಗಳು ಹಿಂದೂಗಳ ವಂಶಹತ್ಯೆಯನ್ನು ಪ್ರಾರಂಭಿಸಿದವು. 1989 ರಿಂದಲೇ ಕಾಶ್ಮೀರದಲ್ಲಿ ಹಿಂಸೆ ಮತ್ತು ದಮನದ ಕಾಲ ಆರಂಭವಾಗಿತ್ತು, ಅದರ ಭಯಾನಕ ಸ್ಫೋಟವು 1990ರ ಜನವರಿ 19ರ ಆ ಕರಾಳ ರಾತ್ರಿಯಂದು ಸಂಭವಿಸಿತು. ಅಂದು ಕಾಶ್ಮೀರ ಕಣಿವೆಯ ಸುಮಾರು 4 ಲಕ್ಷ 50 ಸಾವಿರ ಹಿಂದೂಗಳು, ಅಂದರೆ ಅಲ್ಲಿನ ಒಟ್ಟು ಜನಸಂಖ್ಯೆಯ ಶೇ. 99ರಷ್ಟು ಹಿಂದೂಗಳು ತಮ್ಮದೇ ದೇಶದಲ್ಲಿ ನಿರಾಶ್ರಿತರಾಗಬೇಕಾಯಿತು. ಮೈಮೇಲಿದ್ದ ಬಟ್ಟೆಯಲ್ಲಿಯೇ, ತಮ್ಮ ಮನೆ–ಮಠ ಮತ್ತು ಜೀವನ ಪರ್ಯಂತದ ಗಳಿಕೆಯನ್ನು ಬಿಟ್ಟು ಕೇವಲ ಜೀವ ಉಳಿಸಿಕೊಳ್ಳಲು ಪಲಾಯನ ಮಾಡಬೇಕಾಯಿತು. ಇದು ಜಗತ್ತಿನ ಅತಿದೊಡ್ಡ ಮತ್ತು ನೋವಿನ ಸ್ಥಳಾಂತರಗಳಲ್ಲಿ ಒಂದಾಗಿತ್ತು. ದುರದೃಷ್ಟವಶಾತ್ ಆ ಸಮಯದಲ್ಲಿ ಯಾವುದೇ ಸರ್ಕಾರವಾಗಲಿ ಅಥವಾ ಮಾನವ ಹಕ್ಕುಗಳ ಸಂಘಟನೆಗಳಾಗಲಿ ಅವರ ಸಹಾಯಕ್ಕೆ ಬರಲಿಲ್ಲ.

**ಭಯದ ತಾಂಡವ ಮತ್ತು ಹಿಂದೂಗಳ ಮುಂದಿದ್ದ ಆಯ್ಕೆಗಳು**

ಅಂದು ಸ್ಥಳೀಯ ದಿನಪತ್ರಿಕೆಗಳ ಜಾಹೀರಾತುಗಳು, ಗೋಡೆಗಳ ಮೇಲಿನ ಪೋಸ್ಟರ್‌ಗಳು ಮತ್ತು ಮಸೀದಿಗಳ ಧ್ವನಿವರ್ಧಕಗಳ ಮೂಲಕ ಕಾಶ್ಮೀರಿ ಹಿಂದೂಗಳಿಗೆ ಬಹಿರಂಗ ಬೆದರಿಕೆಗಳನ್ನು ಹಾಕಲಾಗಿತ್ತು. "ಕಾಶ್ಮೀರದಲ್ಲಿ ಇರಬೇಕಾದರೆ ಅಲ್ಲಾ–ಹು–ಅಕ್ಬರ್ ಎನ್ನಲೇಬೇಕು", "ನಮಗೆ ಪಾಕಿಸ್ತಾನ ಬೇಕು ಮತ್ತು ಹಿಂದೂ ಮಹಿಳೆಯರು ಬೇಕು, ಆದರೆ ಅವರ ಪುರುಷರು ಬೇಡ", ಅಂತಹ ಮೈನಡುಗಿಸುವ ಘೋಷಣೆಗಳು ಇಡೀ ಕಣಿವೆಯಲ್ಲಿ ಮೊಳಗಿದ್ದವು. ಭಯೋತ್ಪಾದಕರು ಹಿಂದೂಗಳ ಮುಂದೆ ಕೇವಲ ಮೂರು ಆಯ್ಕೆಗಳನ್ನು ಇಟ್ಟಿದ್ದರು: 'ರಾಲಿವ್, ಗಾಲಿವ್ ಅಥವಾ ಚಾಲಿವ್' (ಅಂದರೆ ಧರ್ಮ ಬದಲಿಸಿ, ಕಾಶ್ಮೀರ ಬಿಡಿ ಅಥವಾ ಸಾಯಲು ಸಿದ್ಧರಾಗಿ). ಈ ಬೆದರಿಕೆಗಳಿಗೆ ಬಗ್ಗದೆ ಮತಾಂತರವನ್ನು ನಿರಾಕರಿಸಿದವರು ತಮ್ಮ ಪ್ರಾಣವನ್ನೇ ಬೆಲೆಯಾಗಿ ನೀಡಬೇಕಾಯಿತು. ಹಿಂದೂಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ಮಾತೃಭೂಮಿ ಮತ್ತು ಆಸ್ತಿಯನ್ನು ತ್ಯಾಗ ಮಾಡಿ ಪಲಾಯನ ಮಾಡಿದರು; ಆದರೆ ಹಿಂದೆ ಉಳಿದವರು ಅಥವಾ ಓಡಿಹೋಗಲು ಸಾಧ್ಯವಾಗದವರ




ಮೇಲೆ ಅಮಾನವೀಯ ದೌರ್ಜನ್ಯಗಳನ್ನು ಎಸಗಲಾಯಿತು.
ನೃಂಶಸ ಹತ್ಯಾಕಾಂಡ ಮತ್ತು ಎದೆ ಬಿರಿಯುವಂತಹ ಘಟನೆಗಳು ಕಾಶ್ಮೀರದಲ್ಲಿ ನಡೆದ ಹಿಂದೂಗಳ ಮಾರಣಹೋಮ, ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ದೇವಾಲಯಗಳ ಧ್ವಂಸ – ಇದು ಎಂದಿಗೂ ಮರೆಮಾಚಲಾಗದ ಇತಿಹಾಸ. ಉಧಮ್‌ಪುರ ಜಿಲ್ಲೆಯ ಪ್ರಾಣಕೋಟ್ ಹತ್ಯಾಕಾಂಡ ಕ್ರೌರ್ಯದ ಎಲ್ಲ ಮಿತಿಗಳನ್ನು ಮೀರಿತ್ತು. ಅಲ್ಲಿ 26 ಮಂದಿ ಅಮಾಯಕ ಹಿಂದೂಗಳನ್ನು ಹತ್ಯೆ ಮಾಡಲಾಯಿತು, ಅವರಲ್ಲಿ ಕೆಲವರನ್ನು ಕೊಡಲಿಯಿಂದ ಇನ್ನು ಕೆಲವರನ್ನು ಲಾಠಿಗಳಿಂದ ಹೊಡೆದು ಸಾಯಿಸಲಾಯಿತು. ಅಂದಿನ ಗೃಹ ಸಚಿವರು ಮತ್ತು ಕಾಂಗ್ರೆಸ್ ನಾಯಕರು ಸಹ ಸ್ಥಳಕ್ಕೆ ಭೇಟಿ ನೀಡಿ ಇದನ್ನು 'ಪಾಶವಿ ನರಮೇಧ' ಎಂದು ಕರೆದಿದ್ದರು.
ಅಂತಹದ್ದೇ ಒಂದು ಹೃದಯವಿದ್ರಾವಕ ಘಟನೆ 1999 ರ ಜೂನ್ 8ರಂದು ನ ಡೆಯಿತು. ಕೇವಲ 6 ವರ್ಷದ ಬಾಲಕಿ 'ಸೀಮಾ' ತನ್ನ ಕಣ್ಣಮುಂದೆ ಕಂಡ ದೃಶ್ಯ ಎಂತಹ ಕಲ್ಲುಹೃದಯದವನನ್ನೂ ಅಳಿಸುವಂತಿತ್ತು. ಭಯೋತ್ಪಾದಕರು ಮನೆಗೆ ನುಗ್ಗಿ ಆಕೆಯ ತಂದೆ ಮತ್ತು ಸಹೋದರರನ್ನು ಆಕೆಯ ಮುಂದೆಯೇ ನರಳಿಸಿ ನರಳಿಸಿ ಕೊಂದರು . ಆಕೆಯ 13 ವರ್ಷದ ಸಹೋದರ ರಾಜೆಂದರ್‌ನ ತಲೆಯನ್ನು ಕತ್ತರಿಸಿ ಹಾಕಿದರು ಮತ್ತು ತಾಯಿಯನ್ನು ಗುಂಡಿಕ್ಕಿ ಕೊಂದರು. ಇಡೀ ಕುಟುಂಬವನ್ನು ಕಳೆದುಕೊಂಡ ಆ ಪುಟ್ಟ ಸೀಮಾ ಅಂದು ತನ್ನ ಹಣೆಬರಹದ ಕತ್ತಲಲ್ಲಿ ಒಂಟಿಯಾಗಿದ್ದಳು. ಆಕೆಯನ್ನು ಸಮಾಧಾನಪಡಿಸುವವರೂ ಅಲ್ಲಿ ಯಾರೂ ಇರಲಿಲ್ಲ.

**ಧಾರ್ಮಿಕ ಮತ್ತು ಸಾಂಸ್ಕೃತಿಕ ಧ್ವಂಸ**

ಇಲ್ಲಿ ಕೇವ ಲ ಜನರ ಹತ್ಯೆಗಳಾಗಲಿಲ್ಲ, ಬದಲಾಗಿ ಹಿಂದೂ ಅಸ್ಮಿತೆಯನ್ನೇ ಹತ್ತಿಕ್ಕಲಾಯಿತು. 1992ರಲ್ಲಿ ಅಯೋಧ್ಯೆಯ ಬಾಬ್ರಿ ಕಟ್ಟಡ ಬಿದ್ದ ಆಕ್ರೋಶದಲ್ಲಿ ಕಾಶ್ಮೀರದ ಅನಂತನಾಗ್, ಶ್ರೀನಗರ, ಬಾರಾಮುಲ್ಲಾ ಮತ್ತು ಝೇಲಂ ನದಿಯ ದಡದಲ್ಲಿದ್ದ ಅನೇಕ ಪ್ರಾಚೀನ ದೇವಾಲಯಗಳನ್ನು ನೆಲಸಮಗೊಳಿಸಲಾಯಿತು. ಎಲ್ಲಿ ಒಮ್ಮೆ ವೇದಗಳ ಪಠಣವಾಗುತ್ತಿತ್ತೋ ಅಂತಹ ಕಾಶ್ಮೀರದಲ್ಲಿ 103 ಕ್ಕೂ ಹೆಚ್ಚು ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಸ್ಥೆಗಳನ್ನು ನಾಶಪಡಿಸಲಾಯಿತು. 20 ಸಾವಿರ ಮನೆಗಳಿಗೆ ಬೆಂಕಿ ಹಚ್ಚಲಾಯಿತು ಮತ್ತು ಶೇ. 95 ರಷ್ಟು ಹಿಂದೂಗಳ ಮನೆಗಳನ್ನು ಲೂಟಿ ಮಾಡಲಾಯಿತು. ಅಂದಾಜು 93 ಸಾವಿರಕ್ಕೂ ಹೆಚ್ಚು ಹಿಂದೂಗಳನ್ನು ಹತ್ಯೆ ಮಾಡಲಾಗಿದೆ ಎಂದು ಹೇಳಲಾಗುತ್ತದೆ. ಇಂದು ಅಲ್ಲಿ ಹಿಂದೂಗಳ ಭವ್ಯ ಬಂಗಲೆಗಳು ಅವಶೇಷಗಳಾಗಿವೆ ಮತ್ತು ದೇವಾಲಯಗಳ ಜಾಗದಲ್ಲಿ ಸ್ಮಶಾನದ ಮೌನ ಆವರಿಸಿದೆ.



ಮುಚ್ಚಿಟ್ಟ ಸತ್ಯ ಮತ್ತು 'ಫ್ಯಾಕ್ಟ್' (ಈಂಲಅಖ) ಸಂಘಟನೆಗಳ ಹೋರಾಟ
ವಿಶ್ವದ ಇತಿಹಾಸದಲ್ಲಿ ಯಹೂದಿಗಳು ಮತ್ತು ಇತರ ಸಮುದಾಯಗಳ ಮೇಲೆ ನ ಡೆದ ದೌರ್ಜನ್ಯಗಳನ್ನು ಗುರುತಿಸಲಾಯಿತು, ಅವರ ಸ್ಮಾರಕಗ ಳನ್ನು ನಿರ್ಮಿಸಲಾಯಿತು; ಆದರೆ ತಮ್ಮದೇ ದೇಶದಲ್ಲಿ ನಿರಾಶ್ರಿತರಾದ ಕಾಶ್ಮೀರಿ ಹಿಂದೂಗಳ ನೋವನ್ನು ಜಗತ್ತಿನ ಮುಂದೆ ಇಡಲು ಯಾರೂ ಮುಂದೆ ಬರಲಿಲ್ಲ. ಅಂದಿನ ಜಾತ್ಯತೀತ ಸರ್ಕಾರಗಳು ಈ ಸತ್ಯವನ್ನು ಹತ್ತಿಕ್ಕಲು ಪ್ರಯತ್ನಿಸಿದವು. ಆದರೆ, ಫ್ರೆಂಚ್ ಪತ್ರಕರ್ತ ಶ್ರೀ ಫ್ರಾಂಸ್ವಾ ಗೋತಿಯೆ ಅವರು ಈ ನಿಟ್ಟಿನಲ್ಲಿ ದೊಡ್ಡ ಹೆಜ್ಜೆ ಇಟ್ಟರು. ಅವರು 'ಫ್ಯಾಕ್ಟ್' (ಈಂಲಅಖ – ಈಬರ್ುಣ ಂಬಟುಣ ಅಠಟಿಣುಟಿಬಿಟಿಡಿಟ ಖಿಜಡಿಡಿಠಡಿಝಟ) ಛಾಯಾಚಿತ್ರ ಪ್ರದರ್ಶನದ ಮೂಲಕ ಕಾಶ್ಮೀರ ಮತ್ತು ಬಾಂಗ್ಲಾದೇಶದ ಹಿಂದೂಗಳ ಮೇಲಿನ ಭೀಕರ ದೌರ್ಜನ್ಯಗಳನ್ನು ಜಗತ್ತಿನ ಮುಂದೆ ತೆರೆದಿಟ್ಟರು. ಹಿಂದೂ ಜನಜಾಗೃತಿ ಸಮಿತಿಯು ಸಹ ಈ ಪ್ರದರ್ಶನವನ್ನು ಅಲ್ಲಲ್ಲಿ ಏರ್ಪಡಿಸಿ ಜನರ ಕಣ್ಣು ತೆರೆಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದೆ.

**ಹಿಂದೂಗಳೇ, ಈಗಲಾದರೂ ಎಚ್ಚೆತ್ತುಕೊಳ್ಳಿ!**

ಇಂದು 36 ವರ್ಷಗಳ ನಂತರವೂ ಬಹುತೇಕ ಕಾಶ್ಮೀರಿ ಹಿಂದೂಗಳು ನ್ಯಾಯಕ್ಕಾಗಿ ಕಾಯುತ್ತಿದ್ದಾರೆ. ಕಾಶ್ಮೀರದ ಭಯೋತ್ಪಾದನೆ ಈಗ ಕೇವಲ ಕಣಿವೆಗೆ ಸೀಮಿತವಾಗಿಲ್ಲ, ಅದು ದೇಶದ ಮತ್ತು ನಮ್ಮ ಬಾಗಿಲಿಗೆ ಬಂದು ತಲುಪಿದೆ. ಜನವರಿ 19ರ ನೆಪದಲ್ಲಿ ಈ ಭೀಕರ ವಾಸ್ತವವನ್ನು ಪುನಃ ನಿಮ್ಮ ಮುಂದೆ ಇಡುವ ಉದ್ದೇಶವೇನೆಂದರೆ ಹಿಂದೂಗಳು ಇನ್ನು ಮುಂದೆ ಅಸಡ್ಡೆಯಿಂದ ಇರಬಾರದು. ರಾಜಕೀಯ ಪಕ್ಷಗಳು ಮತ್ತು ಮಾಧ್ಯಮಗಳು ಮರೆಮಾಚಿದ ಈ ಸತ್ಯವನ್ನು ತಿಳಿದು ಹಿಂದೂಗಳು ಸಂಘಟಿತರಾಗುವುದು ಇಂದಿನ ತುರ್ತು ಅಗತ್ಯವಾಗಿದೆ. ಕಾಶ್ಮೀರಿ ಹಿಂದೂಗಳ ಪುನರ್ವಸತಿಗಾಗಿ ಮತ್ತು ಭವಿಷ್ಯದಲ್ಲಿ ಇಂತಹ ನರಮೇಧ ಮರುಕಳಿಸದಂತೆ ತಡೆಯಲು ಪ್ರತಿಯೊಬ್ಬ ವ್ಯಕ್ತಿಯೂ ಧರ್ಮ ಮತ್ತು ರಾಷ್ಟ್ರಕ್ಕಾಗಿ ಸಕ್ರಿಯರಾಗುವುದು ಅಗತ್ಯ. ಆ ಹುತಾತ್ಮರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಇದೇ ಆಗಿದೆ.

ಶ್ರೀ ರಮೇಶ್ ಶಿಂದೆ, ರಾಷ್ಟ್ರೀಯ ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ

# ರೈತರಿಗಾಗಿ ಐತಿಹಾಸಿಕ ಸುಧಾರಣೆಗಳು..! "ರೈತರಿಗಾಗಿ ವ್ಯಾಪಕ ಜಾಗೃತಿ ಅಭಿಯಾನ"

ರೈತರಿಗಾಗಿ ಐತಿಹಾಸಿಕ ಸುಧಾರಣೆಗಳು': ಕೇಂದ್ರ ಕೃಷಿ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್ ಅವರಿಂದ ಹೊಸ ಬೀಜ ಕಾಯ್ದೆಯ ವಿವರಗಳ ಹಂಚಿಕೆ 'ನಕಲಿ ಬೀಜಗಳ ವಿರುದ್ಧ ಕಠಿಣ ಕ್ರಮ; ಸಾಂಪ್ರದಾಯಿಕ ಬೀಜ ವ್ಯವಸ್ಥೆಗಳು ಸಂರಕ್ಷಿತವಾಗಿರಲಿವೆ': 'ರೈತರ ನೆರವಿಗಾಗಿ ನಕಲಿ ಬೀಜಗಳ ಹಾವಳಿಯನ್ನು ಸಂಪೂರ್ಣವಾಗಿ ಪರಿಹರಿಸಲಾಗುವುದು': ಕೇಂದ್ರ ಕೃಷಿ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್ 'ಕಳಪೆ ಬೀಜಗಳ ಮಾರಾಟಕ್ಕಾಗಿ 30 ಲಕ್ಷ ರೂಪಾಯಿಗಳವರೆಗೆ ದಂಡ ಮತ್ತು ಕಠಿಣ ಶಿಕ್ಷೆಗೆ ಪ್ರಸ್ತಾವನೆ' 'ನಕಲಿ ಅಥವಾ ಕಳಪೆ ಗುಣಮಟ್ಟದ ಬೀಜಗಳನ್ನು ತಕ್ಷಣವೇ ಗುರುತಿಸಲು ಪತ್ತೆಹಚ್ಚುವಿಕೆಯು, ಹೆಚ್ಚಿನ ಪಾರದರ್ಶಕತೆ ತರಲಿದೆ':
'ಬೀಜ ಕಂಪನಿಗಳ ನೋಂದಣಿ ಕಡ್ಡಾಯ; ಅನಧಿಕೃತ ಮಾರಾಟಗಾರರಿಗೆ ಬೀಜ ಮಾರಾಟದಿಂದ ನಿರ್ಬಂಧ'
ನವದೆಹಲಿ : ಕಂಪನಿಗಳು ಮತ್ತು ವಿದೇಶಿ ಬೀಜಗಳಿಗೆ ಸರಿಯಾದ ಮೌಲ್ಯಮಾಪನ ಕಾರ್ಯವಿಧಾನ. "ವಿದೇಶದಿಂದ ಆಮದು ಮಾಡಿಕೊಳ್ಳುವ ಬೀಜಗಳನ್ನು ಸಂಪೂರ್ಣ ಪರೀಕ್ಷೆ ಮತ್ತು ಮೌಲ್ಯಮಾಪನದ ನಂತರವೇ ಅನುಮೋದಿಸಲಾಗುತ್ತದೆ. ನಮ್ಮ ಸಾರ್ವಜನಿಕ ಸಂಸ್ಥೆಗಳು ಮತ್ತು ದೇಶೀಯ ಖಾಸಗಿ ವಲಯವನ್ನು ಬಲಪಡಿಸಲಾಗುವುದು ಇದರಿಂದ ಗುಣಮಟ್ಟದ ಬೀಜಗಳು ರೈತರನ್ನು ತಲುಪುತ್ತವೆ" ಎಂದು ಕೇಂದ್ರ ಸಚಿವರು ಹೇಳಿದರು.

**"ರೈತರಿಗಾಗಿ ವ್ಯಾಪಕ ಜಾಗೃತಿ ಅಭಿಯಾನ"**

ರೈತರಲ್ಲಿ ಜಾಗೃತಿಯ ಕೊರತೆಯ ವಿಷಯದ ಕುರಿತು ಮಾತನಾಡಿದ ಶ್ರೀ ಚೌಹಾಣ್ ಅವರು, ವಿಜ್ಞಾನಿಗಳು, ಅಧಿಕಾರಿಗಳು ಮತ್ತು ಪ್ರಗತಿಪರ ರೈತರು ಗ್ರಾಮಗಳಿಗೆ ತಲುಪಿ ಜಾಗೃತಿ ಮೂಡಿಸುವುದನ್ನು ಖಚಿತಪಡಿಸಿಕೊಳ್ಳಲು 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'ದಂತಹ ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದರು. ಬೀಜದ ಗುಣಮಟ್ಟ, ಬೀಜದ ಆಯ್ಕೆ ಮತ್ತು ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳ ಬಗ್ಗೆ ರೈತರಿಗೆ ಶಿಕ್ಷಣ ನೀಡುವಲ್ಲಿ ದೇಶಾದ್ಯಂತ ಇರುವ ಎಲ್ಲಾ 731 ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅವರು ಹೇಳಿದರು.



"ನಕಲಿ ಬೀಜ ಮಾರಾಟ ಮಾಡುವವರಿಗೆ ಕಠಿಣ ಶಿಕ್ಷೆ"

ಸರ್ಕಾರದ ನಿಲುವನ್ನು ಪುನರುಚ್ಚರಿಸಿದ ಕೇಂದ್ರ ಸಚಿವರು, ಉದ್ದೇಶಪೂರ್ವಕವಾಗಿ ಕಳಪೆ ಬೀಜಗಳನ್ನು ಉತ್ಪಾದಿಸುವ ಅಥವಾ ಮಾರಾಟ ಮಾಡುವವರು ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 30 ಲಕ್ಷ ರೂಪಾಯಿಗಳವರೆಗೆ ದಂಡವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದರು. "ಹಿಂದೆ ಕಾನೂನು ದುರ್ಬಲವಾಗಿತ್ತು. ಈಗ ನಾವು ಅದನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದೇವೆ ಇದರಿಂದ ರೈತರಿಗೆ ನ್ಯಾಯ ಸಿಗುತ್ತದೆ" ಎಂದು ಹೇಳಿದರು.

**"ಹಳತಾದ 1966ರ ಕಾನೂನಿನ ಆಧುನೀಕರಣ"**

ಅಸ್ತಿತ್ವದಲ್ಲಿರುವ 1966 ರ ಬೀಜ ಕಾಯ್ದೆಯು ಸುಧಾರಿತ ತಂತ್ರಜ್ಞಾನ ಅಥವಾ ದತ್ತಾಂಶ ವ್ಯವಸ್ಥೆಗಳಿಲ್ಲದ ಯುಗಕ್ಕೆ ಸೇರಿದ್ದಾಗಿದೆ ಎಂದು ಶ್ರೀ ಚೌಹಾಣ್ ಹೇಳಿದರು. "ನಾವು ಈಗ ಪತ್ತೆಹಚ್ಚುವಿಕೆ, ಡಿಜಿಟಲ್ ದಾಖಲೆಗಳು ಮತ್ತು ಹೊಣೆಗಾರಿಕೆಯ ಆಧಾರದ ಮೇಲೆ ಆಧುನಿಕ ಕಾನೂನನ್ನು ತರುತ್ತಿದ್ದೇವೆ, ಇದರಿಂದ ಭವಿಷ್ಯದಲ್ಲಿ ಯಾವುದೇ ರೈತ ವಂಚನೆಗೊಳಗಾಗುವುದಿಲ್ಲ" ಎಂದು ಅವರು ತಿಳಿಸಿದರು.

**"ರಾಜ್ಯಗಳ ಹಕ್ಕುಗಳು ಅಖಂಡವಾಗಿ ಉಳಿಯಲಿವೆ"**

ಹೊಸ ಕಾನೂನು ರಾಜ್ಯಗಳ ಅಧಿಕಾರವನ್ನು ದುರ್ಬಲಗೊಳಿಸಬಹುದು ಎಂಬ ಆತಂಕಗಳ ಬಗ್ಗೆ ಮಾತನಾಡಿದ ಕೇಂದ್ರ ಸಚಿವರು, "ಕೃಷಿಯು ರಾಜ್ಯದ ವಿಷಯವಾಗಿದೆ. ರಾಜ್ಯ ಸರ್ಕಾರಗಳ ಹಕ್ಕುಗಳು ಅಖಂಡವಾಗಿ ಉಳಿಯಲಿವೆ. ಕೇಂದ್ರವು ಕೇವಲ ಸಮನ್ವಯಗೊಳಿಸುತ್ತದೆ ಮತ್ತು ರಾಜ್ಯಗಳ ಸಹಕಾರದೊಂದಿಗೆ ಕಾನೂನನ್ನು ಜಾರಿಗೆ ತರಲಾಗುವುದು" ಎಂದು ಹೇಳಿದರು.

**"ಪ್ರತಿಯೊಬ್ಬ ರೈತನಿಗೂ ಸೂಕ್ತವಾದ ಬೀಜ ಸಿಗುವಂತೆ ಮಾಡುವುದೇ ನಮ್ಮ ಗುರಿ"**

ಪ್ರತಿಯೊಬ್ಬ ರೈತನಿಗೂ ಗುಣಮಟ್ಟದ ಬೀಜಗಳು ಸಿಗುವಂತೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ ಎಂದು ಶ್ರೀ ಚೌಹಾಣ್ ಹೇಳಿದರು. "ಉತ್ತಮ ಕಂಪನಿಗಳನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ತಪ್ಪು ಮಾಡುವವರು ಕಠಿಣ ಕ್ರಮ ಎದುರಿಸಬೇಕಾಗುತ್ತದೆ. ಅದುವೇ ಈ ಕಾನೂನಿನ ಸಾರ" ಎಂದು ಅವರು ಹೇಳಿದರು. ಬೀಜ ಕಾಯ್ದೆ 2026 ರ ಮೂಲಕ, ಸರ್ಕಾರವು ರೈತರಿಗೆ ಸುರಕ್ಷಿತ, ವಿಶ್ವಾಸಾರ್ಹ ಮತ್ತು ಉತ್ಪಾದಕ ಬೀಜಗಳನ್ನು ಒದಗಿಸುವ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯನ್ನು ಇಡುತ್ತಿದೆ, ಇದು ನಂಬಿಕೆಯನ್ನು ಬಲಪಡಿಸುತ್ತದೆ ಮತ್ತು ದೇಶಾದ್ಯಂತ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದರು.

## ಜ.20ರವರೆಗೆ ವಾಣಿಜ್ಯ ಪರೀಕ್ಷೆ: ನಿಷೇಧಾಜ್ಞೆ ಜಾರಿ

ತುಮಕೂರು: ತುಮಕೂರು ಜಿಲ್ಲೆಯ ಡಯಟ್ ಪರೀಕ್ಷಾ ಕೇಂದ್ರದಲ್ಲಿ ಜನವರಿ 20ರವರೆಗೆ ವಾಣಿಜ್ಯ ಪರೀಕ್ಷೆ ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಆದೇಶ ಹೊರಡಿಸಿದ್ದಾರೆ.
ನಿಷೇಧಾಜ್ಞೆಯು ಜನವರಿ 12 ರಿಂದ 20ರವರೆಗೆ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕಗಳಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಬೆರಳಚ್ಚು ಕೇಂದ್ರಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ. ಜಿಲ್ಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳು ಕಂಡುಬಂದಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳಲಾಗುವುದು ಎಂದು ಅವರು ಸೂಚಿಸಿದ್ದಾರೆ.



ತುಮಕೂರು– ಕುಂಚ ಶ್ರೀ ಮಹಿಳಾ ಬಳಗದ ವತಿಯಿಂದ ಬಟವಾಡಿಯ ಶ್ರೀ ರಂಗ ವಿದ್ಯಾಮಂದಿರದ ಆವರಣದಲ್ಲಿ ಸಂಕ್ರಾಂತಿ ಸುಗ್ಗಿ ಸಂಭ್ರಮ ಕಾರ್ಯಕ್ರಮವನ್ನು ಆಚರಿಸಲಾಯಿತು.
ಕಾರ್ಯಕ್ರಮದಲ್ಲಿ ಎಲೆರಾಂಪುರ ಕುಂಚಿಟಿಗರ ಮಹಾಸಂಸ್ಥಾನ ಮಠದ ಹನುಮಂತನಾಥ ಸ್ವಾಮೀಜಿ, ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಲಲಿತಾ ಮಲ್ಲಪ್ಪ, ಜಿಲ್ಲಾ ಕುಂಚಿಟಿಗ ಒಕ್ಕಲಿಗರ ಸಂಘದ ಅಧ್ಯಕ್ಷ ನೇತಾಜಿ ಶ್ರೀಧರ್, ದೊಡ್ಡಲಿಂಗಪ್ಪ, ಅಶೋಕ್, ಸಿರಾ ಕುಂಚ ಶ್ರೀ ಮಹಿಳಾ ಸಂಘದ ಅಧ್ಯಕ್ಷೆ ಮಂಜುಳಾ ರಾಮ್, ಚಂದ್ರಕಲಾ, ಭವ್ಯ ಸೇರಿದಂತೆ ಹಲವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಂದಕುಂಟೆ ನಾಗರಾಜಯ್ಯಕುರಿತು ಒಡನಾಡಿಗಳ ಮನದಾಳದ ಮಾತುಗಳು

ಕರ್ನಾಟಕ ದಲಿತ ಸಂಘರ್ಷ ಸಮಿತಿ ತುಮಕೂರು ಮತ್ತು ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಇತ್ತೀಚೆಗೆ ನಿಧನರಾದ ಹೋರಾಟದ ಒಡನಾಡಿ, ದಲಿತ ಮುಖಂಡ ಬಂದಕುಂಟೆ ನಾಗರಾಜಯ್ಯ ಅವರಿಗೆ ನುಡಿನಮನ ಕಾರ್ಯಕ್ರಮ ತುಮಕೂರಿನ ಟೌನ್ ಹಾಲ್ ಸರ್ಕಲ್ ನಲ್ಲಿರುವ ಐಎಂಎ ಹಾಲ್ ನಲ್ಲಿ ನಡೆಯಿತು.
ಈ ಸಂದರ್ಭದಲ್ಲಿ ಪ್ರಾಸ್ತಾವಿಕ ಮಾತನಾಡಿದ ಚರಕ ಆಸ್ಪತ್ರೆಯ ಮುಖ್ಯಸ್ಥ ಡಾ.ಬಸವರಾಜು, ದಲಿತ ಸಂಘರ್ಷ ಸಮಿತಿ ತುಮಕೂರಿನಲ್ಲಿ 70–80ರ ದಶಕದಲ್ಲಿ ಬಹಳ ಅದ್ಬುತವಾದ ಸಂಘಟನೆಯಾಗಿ ಹೊರಹೊಮ್ಮಿತ್ತು. ಇದಕ್ಕೆ ಹಲವಾರು ಕಾರಣಕರ್ತರು ಈಗಾಗಲೇ ನಮ್ಮನ್ನು ಅಗಲಿದ್ದಾರೆ. ರೇವಯ್ಯ, ಕೆ.ಬಿ.ಸಿದ್ದಯ್ಯ, ತಿಪಟೂರಿನ ಪಾಂಡು, ಬೆಲ್ಲದಮಡು ರಂಗಸ್ವಾಮಿ, ಬಂದಕುಂಟೆ ನಾಗರಾಜಯ್ಯ ಈ ಐದು ಜನರನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಡಿಎಸ್ ಎಸ್ ಅನಾಥವಾದ ಸ್ಥಿತಿಯಲ್ಲಿದೆ. 70–80ರ ದಶಕದಲ್ಲಿ ನಾವು ತುಮಕೂರಿಗೆ ಕಾಲಿಟ್ಟೆವು. 1975–76ರದಲ್ಲಿ ಡಿಎಸ್ ಎಸ್ ಜನ್ಮತಾಳಿತು. ನಾವು 1980–81ರಲ್ಲಿ ಪಿಯುಸಿ ಓದಲು ಬಂದೆವು. ಆಗ ಸಂಘಟನೆಗಳು ಪ್ರಬಲವಾಗಿ ಈ ಸಮಾಜವನ್ನು ಕಟ್ಟುತ್ತಿದ್ದವು. ಆ ಸಂದರ್ಭದಲ್ಲಿ ಬಂದಕುಂಟೆ ನಾಗರಾಜು ಅವರು ಸ್ಮರಿಸಲೇಬೇಕು. ನಾನು, ರಂಗಸ್ವಾಮಿ, ಬಾಲಕೃಷ್ಣಪ್ಪ ಶ್ರೀನಿವಾಸನ್, ನಾಗೇಂದ್ರಪ್ಪ ಸೇರಿದಂತೆ ಹತ್ತು ಜನ ಸ್ನೇಹಿತರು ಒಟ್ಟಿಗೆ ಇರುತ್ತಿದ್ದೆವು. ನಾವು ಓದಬೇಕಾದರೆ ನಾಗರಾಜಯ್ಯ ಒಳ್ಳೆಯ ವಿಚಾರವಂತರಾಗಿದ್ದರು. ಅವರು ನಮ್ಮನ್ನು ಪ್ರತಿ ಭಾನುವಾರ ಟೌನ್ ಹಾಲ್ ಪಾರ್ಕ್‌ಲ್ಲಿ ನಮಗೆ ಹೋರಾಟದ ನೆನಪುಗಳನ್ನು ತುಂಬುತ್ತಿದ್ದರು. ಇವರ ವಿಚಾರಗಳನ್ನು ಕೇಳಲು ಪಾರ್ಕಿನಲ್ಲಿ ಕುಳಿತಿದ್ದರೆ, ಎನ್.ಜಿ.ರಾಮಚಂದ್ರ, ಶ್ರೀನಿವಾಸ್ ಕುಮಾರ್, ನಟರಾಜಪ್ಪ ಮತ್ತು ಬಂದಕುಂಟೆ ನಾಗರಾಜು ಸಹ ಬ್ಯಾಗ್ ತಗಲುಹಾಕಿಕೊಂಡು ಬರುತ್ತಿದ್ದರು. ಇಂತಹ ಹಿರಿಯರ ಒಡನಾಟ ಇಲ್ಲದೆ ಇದ್ದರೆ, ನಾವು ಏನೋ ಆಗಿರುತ್ತಿದ್ದೆವು. ಇಂತಹ ವಿಚಾರವನ್ನು ಬಿತ್ತಿದ ನಾಗರಾಜಯ್ಯ ಅವರು, ಬಹಳ ಪ್ರತಿಭಾವಂತರಾಗಿದ್ದರು. ಧೈರ್ಯವಂತ, ಸಂಘಟನಾಗಾರ, ಹೋರಾಟಗಾರರಾಗಿದ್ದರು. ಇಂತಹ ಒಬ್ಬ ವ್ಯಕ್ತಿ ಸರಳವಾಗಿ ಮದುವೆಯಾದರು. ಹೋರಾಟದ ಜೊತೆಗೆ ಹೇಗೆ ಕುಟುಂಬವನ್ನು ನಿರ್ವಹಣೆ ಮಾಡಿದರು. ಹೇಗೆ ಸಂಘಟನೆಯನ್ನು ಕಟ್ಟುತ್ತಾ ಹೋದರು ಎಂಬುದು ಎಲ್ಲ ಡಿಎಸ್ ಎಸ್ ಹೋರಟಗಾರರಿಗೂ ಗೊತ್ತಿರುವ ಸಂಗತಿ. ನಮ್ಮ ತಾಲೂಕು ಶಿರಾ. ಅಲ್ಲಿ ಒಂದು ಸಮಾವೇಶ ನಡೆಯುತ್ತದೆ. ನಾನು ಆ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿಗೆ ಬಂದಕುಂಟೆ ನಾಗರಾಜಯ್ಯನವರು ಸಹ ಬಂದಿದ್ದರು. ಪ್ರೊ. ರವಿವರ್ಮ ಬಂದಿದ್ದರು. ಈ ಮೂರು ಜನ ದಲಿತ ಸಮಾವೇಶದಲ್ಲಿ ಮಾತನಾಡಿದ್ದು ನನಗೆ ಕಣ್ಣಿಗೆ ಕಟ್ಟಿದ ಹಾಗಿದೆ ಎಂದರು.




ಹೋರಾಟಗಾರ್ತಿ ಹುಚ್ಚಹನುಮಕ್ಕ ಮಾತನಾಡಿ, ಪರಿಯಾಪಟ್ನಕ್ಕೆ ಹೋರಾಟಕ್ಕೆ ಹೋದೆವು. ಬಂದಕುಂಟೆ ನಾಗರಾಜಯ್ಯ ಜೊತೆ ಸೇರಿಕೊಂಡು ಕಾರ್ಯಕ್ರಮ ನಡೆಸಿದ್ದೇವೆ. ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋರಾಟ ಮಾಡುತ್ತಿದ್ದರು. ಇದರಿಂದಾಗಿ ನಾವು ಕೂಡ ಚಳವಳಿಯಲ್ಲಿ ಭಾಗವಹಿಸಿದೆವು. ಹೆಣ್ಣು ಮಕ್ಕಳು ಹೇಗಿರಬೇಕು ಎಂಬುದನ್ನು ಕಲಿಸಿದರು. ಧೈರ್ಯವಾಗಿ ಇರಬೇಕು ಎಂಬುದನ್ನು ಹೇಳಿಕೊಟ್ಟರು ಎಂದು ಹೇಳಿದರು.
ಡಾ.ಅರುಂಧತಿ ಮಾತನಾಡಿ, ನಾನು 1980ರ ದಶಕದಲ್ಲಿ ಪಿಯುಸಿ ಓದಲು ತುಮಕೂರಿಗೆ ಬಂದೆ. ಆಗ ದಲಿತ ಸಹಪಾಠಿಗಳಾದ ಬಸವರಾಜು, ರಂಗಸ್ವಾಮಿ ಕೃಷ್ಣಪ್ಪ, ಇವರೆಲ್ಲರ ಮೂಲಕ ಕೆ.ಬಿ.ಸಿದ್ದಯ್ಯ, ಬಂದಕುಂಟೆ ನಾಗರಾಜಯ್ಯ ಅವರು ಪರಿಚಯ ಆದರು. ಇವರು ಮಾಡುವ ಕಾರ್ಯಕ್ರಮಗಳಿಗೆ ನಮ್ಮನ್ನು ಕರೆದೊಯ್ಯುತ್ತಿದ್ದರು. ನಾವು ಉತ್ಸಾಹದಿಂದ ಹೋಗುತ್ತಿದ್ದೆವು. ನಾಗರಾಜಯ್ಯ ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳುತ್ತಿರಲಿಲ್ಲ. ಹೊಗಳಿಕೊಳ್ಳುತ್ತಿರಲಿಲ್ಲ. ಹೀಗೆ ಹೇಳಿಕೊಂಡು ಲಾಭ ಮಾಡಿಕೊಳ್ಳುವ ಮನಸ್ಥಿತಿ ಇರಲಿಲ್ಲ. ಅವರು ಚಳವಳಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಮಿದುಳಿಗೆ ಸೇರಿಕೊಂಡಿರುವ ಕೋರೆ ಹಲ್ಲುಗಳು ಹಿಂಸಿಸುತ್ತಿದೆ. ದಲಿತರ ಮೇಲಿನ ಕ್ರೌರ್ಯ ಹೆಚ್ಚುತ್ತಿದೆ. ಶೋಷಣೆಯನ್ನು ಗುರುತಿಸುವಲ್ಲಿ ನಾವು ವಿಫಲರಾಗಿದ್ದೇವೆ. ಕೇವಲ ಹಿಂದಿನವರ ಸಾಹಸ ಗಾಥೆಗಳನ್ನು ಹೇಳಿಕೊಂಡು ಬರುತ್ತಿದ್ದೇವೆ. ಶೋಷಣೆ ಹೆಚ್ಚಲು ಕಾರಣರಾಗುತ್ತಿದ್ದೇವೆ. ಶೋಷಕವರ್ಗ ಮೆದುಳಿನಲ್ಲಿ ಮೂಡಿರುವ ಕೋರೆಹಲ್ಲುಗಳನ್ನು ಗುರುತಿಸಿ ಹೋರಾಟ ಮಾಡಬೇಕು ಎಂದರು.
ಸಾಹಿತಿ ತಿಮ್ಮನಹಳ್ಳಿ ವೇಣುಗೋಪಾಲ್ ಮಾತನಾಡಿ, ಬಂದಕುಂಟೆ ನಾಗರಾಜಯ್ಯ ಭೌತಿಕವಾಗಿ ನಮ್ಮ ಜೊತೆ ಇಲ್ಲ. ಜನಪರ ಸಂಗಾತಿಯಾಗಿದ್ದಂತಹ ಬಂದಕುಂಟೆ ನಾಗರಾಜಯ್ಯ ಇಲ್ಲ. ಆದರೆ ಬಂದಕುಂಟೆ ನಾಗರಾಜಯ್ಯನವರ ಹೋರಾಟ, ಸಂಘಟನೆ, ಅವರ ಸಮಾಜಮುಖಿ ಮನಸ್ಸು ಅವರ ನೆನಪುಗಳು ನಮ್ಮ ಜೊತೆಯಲ್ಲಿ ಇವೆ. ಹಾಗಾಗಿ ಬಂದಕುಂಟೆ ನಾಗರಾಜಯ್ಯ ಸದಾ ನಮ್ಮ ಜೊತೆಯಲ್ಲಿ ಇರುತ್ತಾರೆ. ದಲಿತ ಚಳವಳಿಯ ಮಹಾನ್ ಚೇತನ ಪ್ರೊ.ಬಿ.ಕೃಷ್ಣಪ್ಪ ಬಿತ್ತಿದ ಬಿತ್ತನೆ ಬೀಜದ ಫಸಲು ಬಂದಕುಂಟೆ ನಾಗರಾಜಯ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಬಾಬಾ ಸಾಹೇಬರ ಚಿಂತನೆಯ ಕುಲುಮೆಯಲ್ಲಿ ಬೆಂದು ಅರಳಿದ ತುಮಕೂರು ಜಿಲ್ಲೆಯ ದಲಿತ ದಮನಿತ ಜನರ ಹೋರಾಟಗಾರ. 80ರ ದಶಕದಲ್ಲಿ ನನಗೆ ಬಂದಕುಂಟೆ ನಾಗರಾಜಯ್ಯ ಹೆಚ್ಚು ಪರಿಚಿತರಾದರು. ದಲಿತ ಚಳವಳಿಯಲ್ಲಿ ಅವರು ತೊಡಗಿಸಿಕೊಂಡಿದ್ದರು. ಬಂಡಾಯ ಸಂಘಟನೆ, ಬರವಣಿಗೆಯಲ್ಲಿ ನಾನು ತೊಡಗಿಸಿಕೊಂಡಿದ್ದೆ. ಈ ಸಂದರ್ಭದಲ್ಲಿ ಬೇರೆ ಬೇರೆ ವೇದಿಕೆಗಳಲ್ಲಿ, ಸಂದರ್ಭಗಳಲ್ಲಿ ನನ್ನ ಸಹವರ್ತಿಗಳಾಗಿ ಸಹಚಿಂತಕರಾಗಿ ಆಲೋಚನೆಗಳನ್ನು ಹಂಚಿಕೊಳ್ಳುತ್ತಾ ನನಗೆ ಒತ್ತಾಸೆಯಾಗಿ ನಿಂತವರು ಬಂದಕುಂಟೆ ನಾಗರಾಜಯ್ಯ ಎಂದು ಸ್ಮರಿಸಿದರು.
ರೈತ ಹೋರಾಟಗಾರ ನೀರಕಲ್ಲು ರಾಮಕೃಷ್ಣ ಮಾತನಾಡಿ, ಬಂದಕುಂಟೆ ನಾಗರಾಜಯ್ಯ ಸರ್ವಸ್ವವನ್ನೂ ಹೋರಾಟಕ್ಕೆ ಅರ್ಪಿಸಿಕೊಂಡರು. ಇದಕ್ಕೂ ಮೊದಲು ಬಂದಕುಂಟೆ ನಾಗರಾಜಯ್ಯನವರಿಗೆ ಸಿದ್ದರಬೆಟ್ಟದ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿಕೊಂಡು ಹೋಗಿ 2000 ಕೊಡುತ್ತೇನೆ ಎಂದು ರೇವಯ್ಯ ಹೇಳಿದರು. ಆದರೆ ಅವರು ಸಂಬಳ ಸರಿಯಾಗಿ ಕೊಡುತ್ತಿರಲಿಲ್ಲ. ಹೀಗಾಗಿ ಶಾಲೆಯನ್ನು ಬಿಟ್ಟು ಹೊರಬಂದರು. ಆಗ ಒಂದು ಹಸುವನ್ನು ತೆಗೆದುಕೊಂಡು ಬರುವ ಹಾಲಿನಿಂದ ಜೀವನ ನಡೆಸುವುದು ಎಂದು ತೀರ್ಮಾನವಾಯಿತು. ಸಾಲಕ್ಕಾಗಿ ವಿಜಯ ಬ್ಯಾಂಕ್ ಹೋಗಿ ಮ್ಯಾನೇಜರ್ ಅವರನ್ನ ಕೇಳಿದೆವು. ಉದ್ಯೋಗದಲ್ಲಿರುವವರ ಶ್ಯೂರಿಟಿ ಬೇಕು ಎಂದರು. ನಾವು ಯಾರನ್ನು ಶ್ಯೂರಿಟಿ ಕೊಡುವುದು ಎಂದು ಆಗಲ್ಲ ಎಂದೆವು. ನೀವು ಚಳವಳಿಗಾರರು ನಿಮಗೆ ಸಾಲ ಕೊಡುವುದಿಲ್ಲ ಎಂದರು. ಬ್ಯಾಂಕಿನಿಂದ ಹೊರಗೆ ಬಂದು ನಿಂತೆವು. ಆಗ ಸಣ್ಣಮುದ್ದಯ್ಯ, ಯಾಕ್ರಯ್ಯ ಇಲ್ಲಿ ನಿಂತಿದ್ದೀರ ಎಂದು ಕೇಳಿದರು. ಅದಕ್ಕೆ ನಡೆದ ವಿಚಾರವನ್ನು ತಿಳಿಸಿದೆವು. ಬನ್ನಿ ನಾನೇ ಶ್ಯೂರಿಟಿ ಕೊಡುತ್ತೇನೆ. ಎಂದು ಮತ್ತೆ ಬ್ಯಾಂಕ್ ಮ್ಯಾನೇಜರ್ ಬಳಿ ಕರೆದುಕೊಂಡು ಹೋದರು. ಶ್ಯೂರಿಟಿ ಕೊಟ್ಟ ಮೇಲೆ 25 ಸಾವಿರ ಹಣವನ್ನು ಸಾಲವಾಗಿ ಕೊಟ್ಟರು. ಹಸುವನ್ನು ಕೊಂಡೆವು. ಆದರೆ ಮೇವಿಗೆ ಸಮಸ್ಯೆಯಾಯಿತು. ನನ್ನ ಬಣವೆಯಿಂದಲೇ ಹುಲ್ಲು ಕೊಟ್ಟೆ. ಆದರೂ ಅದರಿಂದ ಜೀವನ ನಡೆಸಲು ಬಂದಕುಂಟೆಯವರಿಗೆ ಸಾಧ್ಯವಾಗಲಿಲ್ಲ ಎಂದು ವಿವರಿಸಿದರು.
ಹೋರಾಟಗಾರ್ತಿ ಅನುರಾಧ ದೊರೈರಾಜ್ ಮಾತನಾಡಿ, ತುಮಕೂರಿನಲ್ಲಿ ಬಂದಕುಂಟೆ ನಾಗರಾಜಯ್ಯ ಅವರ ಮದುವೆ ಆಯಿತು. ಕಾಲೋನಿಯ ನಾವೆಲ್ಲ ರೇಷ್ಮೆ ಸೀರೆಗಳನ್ನು ಧರಿಸಿಕೊಂಡು, ಒಡವೆಗಳನ್ನು ಹಾಕಿಕೊಂಡು ಮದುವೆಗೆ ಹೋದೆವು. ಅಲ್ಲಿದ್ದ ವರ ವಧು ಸಾಮಾನ್ಯ ಬಟ್ಟೆಗಳನ್ನು ಧರಿಸಿಕೊಂಡಿದ್ದರು. ಇದರಿಂದ ನಮಗೆ ನಾಚಿಕೆ ಆಯಿತು. ಸರಳ ಮದುವೆಯಾದರು. ಅಲ್ಲಿಂದ ನಾಗರಾಜಣ್ಣ ನಾವು ತುಂಬ ಹೊಂದಿಕೊಂಡು ಎಲ್ಲಾ ಹೋರಾಟದಲ್ಲಿ ಭಾಗವಹಿಸಿದೆವು. ತುಮಕೂರಿಗೆ ಬಂದಾಗ ನಾಗರಾಜಣ್ಣ ನಮ್ಮ ಮನೆಗೂ ಬರುತ್ತಿದ್ದರು ಎಂದು ಹೇಳಿದರು.
ಲೇಖಕಿ ಮಲ್ಲಿಕಾ ಬಸವರಾಜು ಮಾತನಾಡಿ, ಬಂದಕುಂಟೆ ನಾಗರಾಜಯ್ಯ ಅವರು ನಮ್ಮ ಕುಟುಂಬದೊಂದಿಗೆ ಒಳ್ಳೆಯ ಒಡನಾಟ ಇಟ್ಟುಕೊಂಡಿದ್ದರು. ಅವರು ಮನೆಗೆ ಬಂದಾಗಲೆಲ್ಲ ಆಪ್ತ ಮಾತುಕತೆ ಇರುತ್ತಿತ್ತು. ನಾನು ಹೈಸ್ಕೂಲ್ ನಲ್ಲಿದ್ದಾಗ ಮೊದಲ ಬಾರಿಗೆ ಬಂದಕುಂಟೆ ನಾಗರಾಜಯ್ಯ ಅವರನ್ನು ನೋಡಿದ್ದೆ. ನಮ್ಮ ಅಣ್ಣನ ಜೊತೆಗೆ ಮನೆಗೆ ಬರುತ್ತಿದ್ದರು. ನಮ್ಮ ಮನೆಯಿಂದ ಬಂದಕುಂಟೆ ನಾಗರಾಜಯ್ಯ ಒಂದು ಎಮ್ಮೆ ಖರೀದಿಸಿ ತೆಗೆದುಕೊಂಡು ಹೋಗಿದ್ದರು. ಹಾಲು ಮಾರಿ ಜೀವನ ನಡೆಸುತ್ತಿದ್ದರು. ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ಅವರು ಇದ್ದರು ಎಂದರು.
ನುಡಿನಮನ ಕಾರ್ಯಕ್ರಮದಲ್ಲಿ ಎನ್.ಜಿ.ರಾಮಚಂದ್ರ, ಕುಂದೂರು ತಿಮ್ಮಯ್ಯ, ನರಸಿಂಹಯ್ಯ, ವಿರೂಪಾಕ್ಷ ಡ್ಯಾಗೇರಹಳ್ಳಿ, ಜಿ.ಎನ್. ರಾಮಚಂದ್ರ ಡಾ.ಮುರುಳೀಧರ್, ಕುಂದೂರು ಮುರಳಿ, ಪಿ.ಎನ್. ರಾಮಯ್ಯ, ಕಂಟಲಗೆರೆ ಸಣ್ಣಹೊನ್ನಯ್ಯ, ಡಾ.ಶಿವಣ್ಣ ತಿಮ್ಲಾಪುರ, ನರಸಿಂಹಯ್ಯ, ಎಂ.ಸಿ.ನರಸಿಂಹಮೂರ್ತಿ ಮತ್ತು ಬಂದಕುಂಟೆ ನಾಗರಾಜ್ ಕುಟುಂಬ ವರ್ಗದವರು ಭಾಗವಹಿದ್ದರು.

# ತುಮಕೂರು ರನ್ನರ್ಸ್ ಕ್ಲಬ್‌ಟ್ರಸ್ಟ್ ವತಿಯಿಂದ ಫೆಬ್ರವರಿ 01 ರಂದು ತುಮಕೂರು ಮ್ಯಾರಥಾನ್

ತುಮಕೂರು: ತುಮಕೂರು ರನ್ನರ್ಸ್ ಕ್ಲಬ್‌ಟ್ರಸ್ಟ್ ವತಿಯಿಂದ ಸೇ ನೋ ಡ್ರಗ್ಸ್ ಯಸ್ ಟೂ ಸ್ಪೋರ್ಟ್ಸ್ ಎಂಬ ಘೋಷ ವಾಕ್ಯದೊಂದಿಗೆ 2026ನೇ ಫೆಬ್ರವರಿ 01 ರಂದು 5 ಕಿ.ಮಿ.,10 ಕಿ.ಮಿ ಹಾಗೂ 21 ಕಿ.ಮಿ.ಗಳ 2ನೇ ತುಮಕೂರು ಮ್ಯಾರಥಾನ್ ಆಯೋಜಿಸಲಾಗಿದೆ ಎಂದುತುಮಕೂರು ರನ್ನರ್ಸ್‌ಕ್ಲಬ್ ಟ್ರಸ್ಟ್‌ನ ಕಾರ್ಯದರ್ಶಿ ಡಾ.ರವಿ.ಸಿ.ಎಂ ತಿಳಿಸಿದ್ದಾರೆ.
ಸುದ್ದಿಗೋಷ್ಠಿಯಲ್ಲಿಂದು 2ನೇ ತುಮಕೂರು ಮ್ಯಾರಥಾನ್‌ನ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು,2026ರ ಫೆಬ್ರವರಿ 01 ರಂದು ಬೆಳಗ್ಗೆ 6 ಗಂಟೆಯಿಂದ 8 ಗಂಟೆಯವರಗೆ 2ನೇ ತುಮಕೂರು ಮ್ಯಾರಥಾನ್‌ಓಟಆಯೋಜಿಸಲಾಗಿದೆ. ಈಗಾಗಲೇ 1800 ಓಟಗಾರರುತಮ್ಮ ಹೆಸರು ನೊಂದಾಯಿಸಿದ್ದು,ಜನವರಿ 18ಕ್ಕೆ ಹೆಸರು ನೊಂದಾವಣೆಯ ನೀಡಿದ್ದಅವಧಿ ಪೂರ್ಣಗೊಳ್ಳಲಿದೆ.5,10 ಮತ್ತು 21 ಕಿಮಿ ಓಟದ ಮಹಿಳಾ ಮತ್ತು ಪುರುಷರ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಪಡೆಯುವಓಟಗಾರರಿಗೆಐವತ್ತು ಸಾವಿರ ರೂಗಳ ಬಹುಮಾನವನ್ನು ಹಂಚಿಕೆ ಮಾಡಲಾಗುವುದುಎಂದರು.
ನಾನು ಒಬ್ಬ ಮ್ಯಾರಥಾನ್‌ಓಟಗಾರರನಾಗಿದ್ದು, ಅಭ್ಯಾಸಕ್ಕೆಂದುತುಮಕೂರು ಮಹಾತ್ಮಗಾಂಧಿಕ್ರೀಡಾಂಗಣದಲ್ಲಿ ಬರುವವೇಳೆನನ್ನಂತೆಯೇಅಭ್ಯಾಸನಿರತರಾಗಿದ್ದಕೆಲಓಟಗಾರರು ಸೇರಿತುಮಕೂರುರನ್ನರ್ಸ್‌ಕ್ಲಬ್‌ಟ್ರಸ್ಟ್‌ರಚಿಸಲಾಯಿತು. ಇಂದುತುಮಕೂರುಜಿಲ್ಲೆಯ ಸುಮಾರು 89ಕ್ಕೂ ಹೆಚ್ಚು ಓಟಗಾರರುತಮ್ಮಕ್ಲಬ್‌ನ ಸದಸ್ಯರಾಗಿದ್ದು,ರಾಜ್ಯ,ರಾಷ್ಟ್ರೀಯ, ಅಂತರರಾಷ್ಟ್ರೀಯ ಮ್ಯಾರಥಾನಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ.ನಾವುಗಳು ಬೇರೆ ಊರುಗಳಲ್ಲಿ ಆಯೋಜನೆಯಾಗುವ ಮ್ಯಾರಥಾನ್‌ಗಳ ಭಾಗವಹಿಸಲು ತೆರಳುತಿದ್ದ ಸಂದರ್ಭದಲ್ಲಿ ಆ ಊರಿನ ಹೆಸರು,ಸಿಗುವ ಪ್ರೋತ್ಸಾಹ ಇವುಗಳೆಲ್ಲವನ್ನು ನೋಡಿ,ತುಮಕೂರುರನ್ನರ್ಸ್ ಕ್ಲಬ್‌ಟ್ರಸ್ಟ್ (ರಿ) ಹುಟ್ಟು ಹಾಕಲಾಯಿತುಎಂದು ಡಾ.ರವಿ.ಸಿ.ಎಂ. ತಿಳಿಸಿದರು.
ತುಮಕೂರುರನ್ನರ್ಸ್‌ಕ್ಲಬ್‌ಟ್ರಸ್ಟ್ ಸ್ವಾಮಿ ವಿವೇಕಾನಂದರಜನ್ಮ ದಿನವಾದ 12–01–2025ರ ಮೊದಲನೇ ತುಮಕೂರು ಮ್ಯಾರಥಾನ್ ಆಯೋಜಿಸಿದ್ದು,ಧಾನಿಗಳು, ಕ್ರೀಡಾ ಪ್ರೋತ್ಸಾಹಕರು, ಸಾರ್ವಜನಿಕರ ಸಹಕಾರದಿಂದ,ಮೊದಲನೇ ತುಮಕೂರು ಮ್ಯಾರಥಾನ್ ಸಂಪೂರ್ಣವಾಗಿ ಯಶಸ್ವಿಯಾಗಿ,ತುಮಕೂರು ರನ್ನರ್ಸ್‌ಕ್ಲಬ್‌ಟ್ರಸ್ಟ್‌ಗೆ ಹೆಸರುತಂದುಕೊಟ್ಟಿತ್ತು.ಅದೇ ಹುಮ್ಮಸ್ಸಿನಲ್ಲಿ 2026ರ ಫೆಬ್ರವರಿ 01 ರಂದುಅರ್ಬನ್‌ರೇಸಾರ್ಟ್, ಸಿದ್ದಿ ಬಯೋ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸಹಕಾರದಿಂದ ಎರಡನೇ ತುಮಕೂರು ಮ್ಯಾರಥಾನ್‌ಆಯೋಜಿಸಲಾಗಿದೆ.ಉದಯೋನ್ಮುಖ ಕ್ರೀಡಾಪಟುಗಳ ಪ್ರೋತ್ಸಾಹಕ್ಕೆತುಮಕೂರು ಮ್ಯಾರಥಾನ್ ಒಳ್ಳೆಯ ವೇದಿಕೆಯಾಗಿದೆ.5 ಕಿ.ಮಿ.ಓಟಗಾರರಿಗೆ 599 ರೂ, 10 ಕಿ.ಮಿ.ಓಟಗಾರರಿಗೆ 799 ರೂ,21 ಕಿ.ಮಿ. ಓಟಗಾರರಿಗೆ 899 ರೂ ಪ್ರವೇಶ ಶುಲ್ಕ ನಿಗಧಿ ಪಡಿಸಲಾಗಿದೆ.ಮಹಿಳಾ ಮತ್ತು ಪುರುಷರ ವಿಭಾಗದಲ್ಲಿ ಗೆಲುವು ಸಾಧಿಸಿದ ಓಟಗಾರರಿಗೆ ನೀಡುವ ನಗದು ಬಹುಮಾನವನ್ನು ಮಾಜಿ ಸಂಸದರ ಕೆ.ಮಲ್ಲಣ್ಣಅವರ ಪುತ್ರರಾದ ಸತೀಶ್ ಕೆ.ಮಲ್ಲಣ್ಣ ಪ್ರಯೋಜಿಸಿದ್ದಾರೆ ಎಂದರು.




ಓಟಗಾರರ ಸುರಕ್ಷತೆ ಮತ್ತುರಕ್ಷಣೆಯದೃಷ್ಟಿಯಿಂದ ಸುಮಾರು 200 ಜನ ಎನ್.ಸಿ.ಸಿ. ಮತ್ತುಎನ್.ಎಸ್.ಎಸ್ ಕೇಡಟ್‌ಗಳನ್ನು ಸ್ವಯಂ ಸೇವಕರಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ.ಸಿದ್ದಗಂಗಾ ತ್ರಾಂತಿಕ ವಿದ್ಯಾಲಯದ 50, ವಿದ್ಯಾವಾಹಿನಿಯ 50, ತುಮಕೂರು ವಿವಿ ಸರಕಾರಿಆರ್ಟ್ಸ್‌ಕಾಲೇಜಿನ 50 ಜನರುಜೊತೆಗೆ, ನಮ್ಮ ಸಂಸ್ಥೆಯಓಟಗಾರರು ಸಹ ಸಹಕಾರ ನೀಡಲಿದ್ದಾರೆ.ಈ ಸಂಬಂಧಜನವರಿ 30–31 ರಂದು ಲೋಗೋ ಬಿಡುಗಡೆಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆಎಂದುಡಾ.ರವಿ ಸಿ.ಎಂ. ತಿಳಿಸಿದರು.
ತುಮಕೂರುರನ್ನರ್ಸ್‌ಕ್ಲಬ್‌ಟ್ರಸ್ಟ್‌ನ ಸುಹಾಸ್ ಮಾತನಾಡಿ,2026ರ ಫೆ.01 ರಂದು ಬೆಳ್ಳಗೆ 6 ಗಂಟೆಗೆ 21 ಕಿ.ಮಿ. ಓಟ, 6:30 ಗಂಟೆ 10 ಕಿ.ಮಿ. ಓಟ ಮತ್ತು 7 ಗಂಟೆಗೆ 5 ಕಿ.ಮಿ. ತುಮಕೂರು ಮ್ಯಾರಥಾನ್‌ಆರಂಭವಾಗಲಿದೆ. ತುಮಕೂರು ನಗರದ ಮಹಾತ್ಮಗಾಂಧಿಕ್ರೀಡಾಂಗಣದಿಂದಆರಂಭವಾಗುವತುಮಕೂರು ಮ್ಯಾರಥಾನ್‌ಓಟ ಬೆಳಗುಂಬ ತಲುಪಿ,ಮಾರುತಿಇಂಟರ್ ನ್ಯಾಷನಲ್ ಶಾಲೆಯ ಬಳಿ ಎಡಕ್ಕೆ ತಿರುಗಿ,ವಡ್ಡರಹಳ್ಳಿ ಮೂಲಕ ಸ್ವಾಂದೇನಹಳ್ಳಿ, ಅಜ್ಜಪ್ಪನಹಳ್ಳಿಗೆ ತಲುಪಿ, ಅದೇ ಮಾರ್ಗದಲ್ಲಿ ವಾಪಸ್ಸಾಗಿ, ಮಹಾತ್ಮಗಾಂಧಿಕ್ರೀಡಾಂಗಣದ ಬಳಿ ಮುಕ್ತಾಯವಾಗಲಿದೆ. ಓಟದಲ್ಲಿ ಭಾಗವಹಿಸಿ,ಓಟವನ್ನು ಸಂಪೂರ್ಣ ಗೊಳಿಸುವ ಎಲ್ಲರಿಗೂತುಮಕೂರಿನ ವಿಶೇಷತೆಗಳಾದ ತೆಂಗು,ಸಿದ್ದಗಂಗಾ ಮಠ, ಏಕಶಿಲಾ ಬೆಟ್ಟ ಇವುಗಳನ್ನು ಒಳಗೊಂಡ ಲೋಗೋ ಇರುವ ವಿಶೇಷ ಪದಕವನ್ನು ನೀಡಲಾಗುವುದು. ತುಮಕೂರಿನಕ್ರೀಡಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ,2ನೇ ತುಮಕೂರು ಮ್ಯಾರಥಾನ್ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.
ಸುದ್ದಿಗೋಷ್ಠಿಯಲ್ಲಿತುಮಕೂರುರನ್ನರ್ಸ್‌ಕ್ಲಬ್‌ಟ್ರಸ್ಟ್‌ನದರ್ಶನ್, ಸತೀಶ್.ಕೆ.ಮಲ್ಲಣ್ಣ, ಶ್ರೀಮತಿ ಸುನೀತ, ರವೀಶ್, ಸಂಜೀತ್ ಮಲ್ಲಣ್ಣ, ಸುಹಾಸ್,ಕೋರ್‌ಕಮಿಟಿ ಸದಸ್ಯರಾದ ನಂದೀಶ್ ಮತ್ತಿತರರು ಉಪಸ್ಥಿತರಿದ್ದರು.

**ವಿಜಯನಗರ ಸಾಮ್ರಾಜ್ಯದ ಅಪ್ರತಿಮ ಅರಸ ಶ್ರೀ ಕೃಷ್ಣದೇವರಾಯರ ಸಂಭ್ರಮದ ಜಯಂತೋತ್ಸವ.**

ಶಿರಾ: ಸಮಾಜದಲ್ಲಿ ಒಗ್ಗಟ್ಟು ಬಹಳ ಮುಖ್ಯ. ಕೃಷ್ಣದೇವರಾಯರಂತಹ ಮಹಾನ್ ಅರಸರ ತತ್ವಗಳು ನಮಗೆ ಆದರ್ಶವಾಗಬೇಕು. ಈ ಭಾಗದ ಜನರ ಮತ್ತು ಸಮುದಾಯದ ಅಭಿವೃದ್ಧಿಗೆ ನಾವು ಕೂಡ ಸಹಕರಿಸುತ್ತೇವೆ ಎಂದು ಹೇಳಿದ ವಿ.ಪ.ಸದಸ್ಯ ಚಿದಾನಂದ್ ಎಂ. ಗೌಡ.
ತಾಲೂಕಿನ ಅಗ್ರಹಾರ ಗ್ರಾಮದಲ್ಲಿ ಅತ್ಯಂತ ಸಡಗರ ಹಾಗೂ ಸಾಂಸ್ಕೃತಿಕ ವೈಭವದೊಂದಿಗೆ ಶ್ರೀ ಕೃಷ್ಣದೇವರಾಯ ಬಲಿಜ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಪ್ರಥಮ ವರ್ಷದ ವಿಜಯನಗರ ಸಾಮ್ರಾಜ್ಯದ ಅಪ್ರತಿಮ ಅರಸ ಶ್ರೀ ಕೃಷ್ಣದೇವರಾಯರ ಜಯಂತೋತ್ಸವದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.
ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧನಾದ ಚಕ್ರವರ್ತಿ ಶ್ರೀ ಕೃಷ್ಣದೇವರಾಯ, ಪ್ರಖ್ಯಾತನಾಗಿರುವುದು ತನ್ನ ವಿಜಯಯಾತ್ರೆಗಳಿಗಿಂತ ಅಧಿಕವಾಗಿ ತಾನು ಸಂಸ್ಕೃತಿಗೆ ಕೊಟ್ಟ ಪ್ರೋತ್ಸಾಹದಿಂದಾಗಿ. ವಿಜಯನಗರದ ಅರಸರ ರಾಜಧಾನಿಯಾಗಿದ್ದ ಹಂಪೆ ತನ್ನ ಶಿಲ್ಪಕಲಾ ವೈಭೋಗವನ್ನು ಕೃಷ್ಣದೇವರಾಯನ ಹಿಂದಿನ ಕಾಲದಿಂದಲೂ ಮೊದಲುಗೊಂಡು, ಈತನ ಯುಗದಲ್ಲಿ ಸಾಕಷ್ಟು ವಿಸ್ತಾರಗೊಂಡು ವೈಭೋಗ ಪಡೆದುಕೊಂಡಿತು. ಈತ ಮಹಮ್ಮದೀಯರಿಂದ ನಾಶವಾಗಿದ್ದ ಸುಪ್ರಸಿದ್ಧ ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಮಾಡಿ, ಹಿಂದೂಧರ್ಮದ ಪುನರೇಳಿಗೆಗೆ ಕಾರಣನಾದ. ಉದಯಗಿರಿಯಿಂದ ಬಾಲಗೋಪಾಲವಿಗ್ರಹವನ್ನು ತರಿಸಿ ರಾಜಧಾನಿಯಲ್ಲಿ ಪ್ರತಿಷ್ಠಿಸಿದುದಲ್ಲದೆ, ಹಂಪಿಯ ವಿಜಯವಿಠಲಸ್ವಾಮಿಯ ಕಲಾಪೂರ್ಣವಾದ ದೇವಾಲಯವನ್ನು ಕಟ್ಟಿಸಿದ. ಈತ ಎಲ್ಲ ಮತಗಳಿಗೂ ಆಶ್ರಯದಾತನಾಗಿದ್ದ ಎಂದರು.
.ಕಾರ್ಯಕ್ರಮದಲ್ಲಿ ಬಲಿಜ ಸಮುದಾಯದ



ಹಿರಿಯ ಮುಖಂಡರು, ಭಾರತೀಯ ಜನತಾ ಪಾರ್ಟಿಯ ಮಾಜಿ ಅಧ್ಯಕ್ಷರು ಹಾಗೂ ಪೂನಂ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಜಿ ಗೋವಿಂದಪ್ಪನವರು ಭಾಗವಹಿಸಿ, ಶಾಸಕರೊಂದಿಗೆ ಮೆರವಣಿಗೆಯ ಸಾರಥ್ಯ ವಹಿಸಿದರು. ವಿ ಪ ಶಾಸಕ ಚಿದಾನಂದ ಎಂ ಗೌಡ ರವರ ನಾಯಕತ್ವ ಮತ್ತು ಸಂಘಟನಾ ಚಾತುರ್ಯವನ್ನು ಈ ಸಂದರ್ಭದಲ್ಲಿ ಮುಕ್ತಕಂಠದಿಂದ ಶ್ಲಾಘಿಸಿದರು.
ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬಲಿಜ ಬಾಂಧವರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು. ಶ್ರೀ ಕೃಷ್ಣದೇವರಾಯ ಬಲಿಜ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳ ಶ್ರಮದಿಂದಾಗಿ ಈ ಜಯಂತೋತ್ಸವವು ಚಾರಿತ್ರಿಕ ಯಶಸ್ಸು ಕಂಡಿತು. ಈ ಸಸುಂದರ್ಭ ಶ್ರೀ ಕೃಷ್ಣ ದೇವರಾಯ ಜಯಂತಿಯ ದಿನವೇ ಸಿಎಂಜಿ ಸೂರ್ಯಬಿಂಬ ಸೋಲರ್ ಹೈಮಾಸ್ಟ್ ಗೆ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.
ಈ ಸಂದರ್ಭದಲ್ಲಿ ಮುಖಂಡರಾದ ರಾಜಣ್ಣ, ರಾಮಣ್ಣ, ವಿನೋದ್ ಕುಮಾರ್, ತಾಲೂಕು ಪಂಚಾಯ್ತಿ ಮಾಜಿ ಸದಸ್ಯರಾದ ಚಿಕ್ಕಣ್ಣ, ಹನುಮಂತ ನಾಯ್ಕ, ರಂಗನಾಥ್, ವೇಣುಗೋಪಾಲ್, ನಾಗರಾಜ್, ನಾಗರತ್ನಮ್ಮ, ಸಮಾಜದ ಮುಖಂಡರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಾಹೇ ವಿವಿ ಆವರಣದಲ್ಲಿ ನೂತನ ಸಿಂಥೆಟಿಕ್ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ ಉದ್ಘಾಟನೆ

ತುಮಕೂರು: ರಾಷ್ಟ್ರದ ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಒಂದಾದ ಸಾಹೇ ವಿವಿಯಲ್ಲಿ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ವಿವಿಧ ಕ್ರೀಡೆಗಳ ತರಬೇತಿಗೆ ಅನುಕೂಲವಾಗುವಂತೆ ನೂತನವಾಗಿ ಸುಸಜ್ಜಿತವಾದ ಸಿಂಥೆಟಿಕ್ ಬಾಸ್ಕೆಟ್ ಬಾಲ್ ಕ್ರೀಡಾಂಗಣವನ್ನು ಸೋಮವಾರ ಉದ್ಘಾಟನೆಗೊಳಿಸಲಾಯಿತು.

ನಗರದ ಸಮೀಪದ ಅಗಲಕೋಟೆಯಲ್ಲಿರುವ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಆವರಣದಲ್ಲಿ ಸಜ್ಜುಗೊಳಿಸಲಾದ ನೂತನ ಕ್ರೀಡಾಂಗಣವನ್ನು ಸಾಹೇ ವಿವಿ ಕುಲಾಧಿಪತಿಗಳ ಸಲಹೆಗಾರರಾದ ಡಾ. ವಿವೇಕ್ ವೀರಯ್ಯ ಅವರು ಉದ್ಘಾಟನೆ ಮಾಡಿದರು.

ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರಾದ ಡಾ.ಸಾನಿಕೊಪ್ಪ ಅವರು ಮಾತನಾಡಿ ದೈಹಿಕ ಕಾರ್ಯಕ್ರಮತೆಯನ್ನು ಹೆಚ್ಚಿಸಲು ಕ್ರೀಡೆ ಅವಶ್ಯಕವಾಗಿದೆ. ಸೋಲು ಗೆಲುವುಗಳನ್ನು ಪರಿಗಣಿಸದೆ ನಿರಂತರವಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಿ ಎಂದು ಕರೆ ನೀಡಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಜೊತೆಗೆ ಕೈಜೋಡಿಸಿ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳನ್ನ ಆಯೋಜಿಸುವ ಮೂಲಕ ಸಹಕಾರ, ಸೌಲಭ್ಯಗಳನ್ನು ನೀಡುತ್ತಿವೆ. ಸಾಹೇ ಕುಲಾಧಿಪತಿಗಳಾದ ಡಾ. ಜಿ. ಪರಮೇಶ್ವರ್ ಸ್ವತಃ ಅಥ್ಲೆಟಿಕ್ ಕ್ರೀಡಾಪಟುವಾಗಿದ್ದು, ಅವರ



ಆಶಯದಂತೆ ವಿದ್ಯಾರ್ಥಿಗಳ ಕ್ರೀಡಾ ತರಬೇತಿಗೆ ಅನುಕೂಲವಾಗುವಂತೆ ಅನೇಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶಾಂತಲಾ ರಾಜಣ್ಣ ಅವರು ಮಾತನಾಡಿ ಇಂದಿನ ಕ್ರೀಡೆಗಳಲ್ಲಿ ಹೆಚ್ಚಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಂಡು ಬರುತ್ತಿರುವುದು ಶ್ಲಾಘನೀಯವಾಗಿದೆ. ದೇಸಿ ಕ್ರೀಡೆಗಳ ಜೊತೆ ಜೊತೆಗೆ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಹೆಣ್ಣುಮಕ್ಕಳು ಇತ್ತೀಚೆಗೆ ಸಾಧಿಸಿರುವ ಸಾಧನೆಗಳು ಅಮೋಘವಾಗಿದೆ. ಈ ನಿಟ್ಟಿನಲ್ಲಿ ಡಾ.ಜಿ ಪರಮೇಶ್ವರ್ ಅವರು ತುಮಕೂರು ಜಿಲ್ಲೆಯಲ್ಲಿ ಆಯೋಜಿಸಿರುವ ಕರ್ನಾಟಕ ಕ್ರೀಡೋತ್ಸವ ಕ್ರೀಡಾ ಸಾಧಕರಿಗೆ ಬೆಂಬಲವಾಗಿ ಬಂದೊದಗಿದೆ ಎಂದು ತಿಳಿಸಿದರು.

ಸಂದರ್ಭದಲ್ಲಿ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಪ್ರಭಾಕರ್, ಪ್ರಾಧ್ಯಾಪಕರುಗಳಾದ ಡಾ. ನಂದಿನಿ, ಡಾ. ಚಂದ್ರಶೇಖರ್, ಕ್ರೀಡೋತ್ಸವದ ನೋಡಲ್ ಅಧಿಕಾರಿ ಸಂದೇಶ್ ಎಂ.ಎಸ್ , ಬಾಸ್ಕೆಟ್ ಬಾಲ್ ಟೆಕ್ನಿಕಲ್ ಕಮಿಟಿಯ ಅಧ್ಯಕ್ಷ ಎಸ್ ವೆಂಕಟೇಶ್ , ಸಾಹೇ ವಿವಿ ದೈಹಿಕ ಶಿಕ್ಷಣ ನಿರ್ದೇಶಕರಾದ ಶಶಿಕುಮಾರ್, ಮತ್ತು ವಿವಿಧ ತಂಡಗಳ ವ್ಯವಸ್ಥಾಪಕರು ಮತ್ತು ತರಬೇತುದಾರರು, ಕ್ರೀಡಾಪಟುಗಳು ಉಪಸ್ಥಿತರಿದ್ದರು.



ಸಾಹೇ ವಿವಿಯ ನೂತನ ಕ್ರೀಡಾಂಗಣದಲ್ಲಿ ಕರ್ನಾಟಕ ಕ್ರೀಡೋತ್ಸವದ ಬಾಸ್ಕೆಟ್ ಬಾಲ್‌ನ 8 ಪಂದ್ಯಗಳು ಮುಖಾ ಮುಖಿಯಾದವು.

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಶಿರಾ : ಅನ್ನದಾತರ ಸಮಸ್ಯೆಗಳಿಗೆ ಸ್ಪಂದಿಸಿ, ಜನಸ್ನೇಹಿ ಆಡಳಿತ ನೀಡುವುದರ ಜೊತೆಗೆ, ಕೃಷಿ ಚಟುವಟಿಕೆಗಳಿಗೆ ಪೂರಕವಾಗುವ ರೀತಿ ಸಾಲ ಸೌಲಭ್ಯ ನೀಡುವಂತೆ ಮಾಡಿ ರೈತರನ್ನು ಆರ್ಥಿಕ ಸದೃಢರನ್ನಾಗಿ ಮಾಡುವುದೇ ನನ್ನ ಗುರಿ ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರದ ಸಂಘದ ಮಾಜಿ ಅಧ್ಯಕ್ಷ ಹೆಚ್. ಪಿ. ಶಶಿಧರ್ ಹೇಳಿದರು.



ಶಿರಾ ತಾಲೂಕಿನ ಗೌಡಗೆರೆ ಹೋಬಳಿಯ ಪ್ರತಿಷ್ಠಿತ ಹುಣಸೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಹೆಚ್. ಪಿ. ಶಶಿಧರ್ ನೇತೃತ್ವದಲ್ಲಿ ತಂಡದ ಎಲ್ಲಾ ಅಭ್ಯರ್ಥಿಗಳು ಭರ್ಜರಿ ಜಯಸಾಧಿಸಿದ್ದು, ಈ ಗೆಲುವಿಗೆ ಕಾರಣಕರ್ತರಾದ ಮತದಾರರನ್ನು ಹಾಗೂ ಸಹಕರಿಸಿದವರನ್ನು ಉದ್ದೇಶಿಸಿ ಮಾತನಾಡಿದರು.

ನಮ್ಮ ದೇಶದಲ್ಲಿ ರೈತರಿಗೆ ಆರ್ಥಿಕವಾಗಿ ಬೆನ್ನೆಲುಬಾಗಿ ನಿಂತಿರುವ ಯಾವುದಾದರು ಕ್ಷೇತ್ರ ಇದ್ದರೆ ಅದುವೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ, ಪರಸ್ಪರ ಸಹಕಾರ , ಸೇವಾ ಮನೋಭಾವದೊಂದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಮುನ್ನಡೆಸಿದಾಗ ಸಂಘ ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯ. ಸಂಘಕ್ಕೆ ಆಗಮಿಸುವ ರೈತರಿಗೆ ಅತ್ಯಂತ ಗೌರವಪೂರ್ವಕವಾಗಿ ಮಾತನಾಡಿಸುವ ಮೂಲಕ ಉತ್ತಮ ಆಡಳಿತ ನೀಡುವಂತಹ ಪ್ರವೃತ್ತಿಯನ್ನು ನಿರ್ದೇಶಕರುಗಳು ಸೇರಿದಂತೆ ಸಿಬ್ಬಂದಿಗಳು ಬೆಳೆಸಿಕೊಳ್ಳಬೇಕು, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ರೀತಿ ರಸಗೊಬ್ಬರ ವಿತರಣೆ ಮಾಡಿ ರೈತರಿಗೆ ಅನುಕೂಲ ಕಲ್ಪಿಸಬೇಕು, ಅನ್ನದಾತ ಈ ದೇಶದ ಬೆನ್ನೆಲುಬು, ರೈತರಿಗೆ ಸರಿಯಾದ ರೀತಿ ಸಾಲ ವಿತರಿಸಿ ಮರುಪಾವತಿ ಬಗ್ಗೆ ಅರ್ಥೈಸಿದಾಗ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ ಎಂದರು.

ನೂತನ ನಿರ್ದೇಶಕರಾಗಿ ಹೆಚ್. ಲಕ್ಷ್ಮಿ ರಾಜ್, ಎಂ. ಪದ್ಮನಾಭನ್, ಸಿ. ಚಿತ್ರಲಿಂಗ, ಎಚ್. ಕೆ. ಬೋಜರಾಜು, ಪಾಂಡುರಂಗಪ್ಪ, ಭಾಗ್ಯಮ್ಮ, ನಿರ್ಮಲ, ಸಾಕಮ್ಮ, ಪುಟ್ಟಜುಂಜಯ್ಯ, ಡಿ.ತಿಪ್ಪೇಸ್ವಾಮಿ, ಚಿದಾನಂದ, ತಿಪ್ಪೇಸ್ವಾಮಿ ಭರ್ಜರಿ ಗೆಲುವು ಸಾಧಿಸಿದರು

ಪ್ರತಿಷ್ಠೆಯ ಜಿದ್ದಾ ಜಿದ್ದಿನ ಕಣವಾಗಿ ನಡೆದ ಹುಣಸೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ತಾಲೂಕು ಮಟ್ಟದಲ್ಲಿ ಸದ್ದು ಮಾಡಿತ್ತು.

## ಶುದ್ಧ ಕುಡಿಯುವ ನೀರು ಮನೆಬಾಗಿಲಿಗೆ



ಗುಬ್ಬಿ : ಮೂಲಭೂತ ಸೌಕರ್ಯ ಒದಗಿಸುವ ಸದುದ್ದೇಶ ಹೊಂದಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮನೆ ಮನೆ ಬಾಗಿಲಿಗೆ ನಲ್ಲಿ ಸಂಪರ್ಕ ಕಲ್ಪಿಸಿ ಕುಡಿಯುವ ನೀರಿನ ದಾಹ ಪರಿಹರಿಸುವಲ್ಲಿ ಯಶಸ್ವಿಯತ್ತ ಸಾಗಿದೆ ಎಂದು ಹೊಸಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜೇಂದ್ರಪ್ರಸಾದ್ ಹೇಳಿದರು.

ಅವರು ಹೊಸಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರೇಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಮನೆ ಮನೆ ಗಂಗೆ ಕಾರ್ಯಕ್ರಮದ ಗ್ರಾಮಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದೆ ಕೆರೆ, ಕೊಳ, ಬಾವಿಗಳಲ್ಲಿ ನೀರು ತರುತ್ತಿದ್ದರು. ನಂತರದ ದಿನಗಳಲ್ಲಿ ಸಿಸ್ಟನ್ ಗಳನ್ನ ಗ್ರಾಮದ ಮುಖ್ಯಭಾಗಗಳಲ್ಲಿಟ್ಟು ನೀರೊದಗಿಸುತ್ತಿದ್ದರು ಆದರೂ ನೀರಿನ ಕೊ, ತೆ ಹಾಗೂ ಗುಣಮಟ್ಟದ ಸಮಸ್ಯೆ ಬಗೆಹರಿಯಲಿಲ್ಲ, ಅದನ್ನರಿತ ಸರ್ಕಾರ ಮನೆ ಮನೆ ಬಾಗಿಲಿಗೆ ನೀರು ಕೊಡಲು ನಿರ್ಧರಿಸಿದೆ, ಸರ್ಕಾರದ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿಮಾಡಿದರು.

## ಮಾದರ ಮಹಾಸಭಾಕ್ಕೆ ಪದಾಧಿಕಾರಿಗಳ ಆಯ್ಕೆ



ಗುಬ್ಬಿ –ಆರ್ಥಿಕವಾಗಿ ಸದೃಢರಾಗಲು ಮತ್ತು ಮುಂದಿನ ಪೀಳಿಗೆ ಸಮಾಜದಲ್ಲಿ ಬೆಳೆಯುವ ದೃಷ್ಟಿಯಿಂದ ಪ್ರಾರಂಭವಾಗಿರುವ ಮಾದರ ಮಹಾಸಭಾದ ಗುಬ್ಬಿ ನಗರದ ಪದಾಧಿಕಾರಿಗಳನ್ನು ತಾಲ್ಲೂಕು ಅಧ್ಯಕ್ಷರಾದ ಮಹಾದೇವ ಕೊಡಿಯಾಲ ರವರ ನೇತೃತ್ವದಲ್ಲಿ ಆಯ್ಕೆ ಮಾಡಲಾಗಿದೆ

ನಗರ ಅಧ್ಯಕ್ಷರಾಗಿ ಮನೋಹರ್ ಜಿಎನ್. ಉಪಾಧ್ಯಕ್ಷರಾಗಿ ನರಸಿಂಹಮೂರ್ತಿ (ಸ್ವಾಮಿ) ಹಿರಿಯ ಉಪಾಧ್ಯಕ್ಷರಾಗಿ ಪಾಂಡುರಂಗಯ್ಯ, ಕಾರ್ಯದರ್ಶಿ ಮಧು ಕೆ, ಖಜಾಂಚಿ ಮಂಜುನಾಥ್ ಜಿಎಂ (ಆಟೋ)ಸಂಘಟನಾ ಕಾರ್ಯದರ್ಶಿ ಶಿವರಾಜ್‌ಸಲಹಾ ಸಮಿತಿ ಕೆ.ಸೋಮಶೇಖರ್ ,ಅನಿಲ್ ಕುಮಾರ್, ಮಂಜುನಾಥ್,ಅಂಜನ್ ಕುಮಾರ್ ರವರುಗಳನ್ನು ಆಯ್ಕೆ ಮಾಡಲಾಗಿದೆ.

### ಜ.26ರಂದು "ಗಣರಾಜ್ಯೋತ್ಸವ ದಿನಾಚರಣೆ–2026"

ತುಮಕೂರು: ಜಿಲ್ಲಾಡಳಿತದ ವತಿಯಿಂದ ಜನವರಿ 26ರಂದು ಬೆಳಿಗ್ಗೆ 9 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ "ಗಣರಾಜ್ಯೋತ್ಸವ ದಿನಾಚರಣೆ–2025" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ಹಾಗೂ ಸಂಸದ ವಿ.ಸೋಮಣ್ಣ ಅವರ ಘನ ಉಪಸ್ಥಿತಿಯಲ್ಲಿ ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಗೌರವ ರಕ್ಷೆ ಸ್ವೀಕರಿಸುವರು. ನಗರ ವಿಧಾನಸಭಾ ಕ್ಷೇತ್ರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು ಸೇರಿದಂತೆ ಮತ್ತಿತರರು ಭಾಗವಹಿಸುವರು.

ಅಂದು ಸಂಜೆ 4.30 ಗಂಟೆಗೆ ನಗರದ ಡಾ: ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

### ನಾಳೆ ಅಂಬಿಗರ ಚೌಡಯ್ಯ ಜಯಂತಿ, ಅಕ್ಷರ ದಾಸೋಹ ದಿನಾಚರಣೆ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಗಂಗಮತಸ್ಥರ ಸಂಘದ ವತಿಯಿಂದ ಜನವರಿ 21ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ: ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ "ನಿಜಶರಣ ಅಂಬಿಗರ ಚೌಡಯ್ಯ ಜಯಂತಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ನಿಜಶರಣ ಅಂಬಿಗರ ಚೌಡಯ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಗುವುದು. ವಿವಿಧ ಇಲಾಖೆಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗ, ಸಮುದಾಯದ ಮುಖಂಡರು, ಕಲಾವಿದರು, ಗಣ್ಯರು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ಮಧ್ಯಂತರ ವಿದ್ಯುತ್ ವ್ಯತ್ಯಯ

ತುಮಕೂರ: ಬೆಸ್ಕಾಂ ನಗರ ಉಪವಿಭಾಗ–1ರ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಕೇಬಲ್ ಅನ್ನು ಬದಲಿಸುವ ಕಾಮಗಾರಿ ಕೈಗೊಂಡಿರುವುದರಿಂದ ಜನವರಿ 20ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ತಿಪ್ಪನಹಳ್ಳಿ, ಯಲ್ಲಾಪುರ, ಅಂತರಸನಹಳ್ಳಿ, ಬೋವಿಪಾಳ್ಯ, ಎಸ್.ಎಲ್.ಎನ್. ಬಡಾವಣೆ, ಅರಕೆರೆ ಹೊಸಬಡಾವಣೆ, ಅರಕೆರೆ, ತಿಪ್ಪನಹಳ್ಳಿ ಮಲ್ಲೇನಳ್ಳಿ, 80 ಫೀಟ್ ರಸ್ತೆ ಸಿರಾಗೇಟ್, ನಾಗಣ್ಣನ ಪಾಳ್ಯ, ಚಿಕ್ಕವೀರಯ್ಯನ ಪಾಳ್ಯ, ಟೂಡಾ ಲೇಔಟ್, ಎಸ್.ಎನ್.ಪಾಳ್ಯ, ಸಾಯಿನಗರ, ಹೊನ್ನೇನಹಳ್ಳಿ, ಸಿರಾಗೇಟ್ ಹೌಸಿಂಗ್ ಬೋರ್ಡ್, ಲಿಂಗಾಪುರ ವಾಸವಿನಗರ, ಅರಳೀಮರದ ಪಾಳ್ಯ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

### ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟ: ವೇಟ್‌ಲಿಫ್ಟಿಂಗ್ ಸಾಧನೆ



ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿಯ ಮಾಟಗಾನಹಳ್ಳಿ ಗ್ರಾಮದ ಕ್ರೀಡಾಪಟು ಪೂಜಿತಾ ಅವರು ವೇಟ್‌ಲಿಫ್ಟಿಂಗ್ (Weightlifting) ಸ್ಪರ್ಧೆಗಳಲ್ಲಿ 53 ಕೆಜಿ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಈ ಪ್ರತಿಷ್ಠಿತ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಪೈಪೋಟಿಯ ನಡುವೆಯೂ ಪೂಜಿತಾ ಅವರು ಸ್ನ್ಯಾಚ್‌ನಲ್ಲಿ 50 ಕೆಜಿ, ಕ್ಲೀನ್ ಅಂಡ್ ಜರ್ಕ್‌ನಲ್ಲಿ 71 ಕೆಜಿ ಭಾರವನ್ನು ಯಶಸ್ವಿಯಾಗಿ ಎತ್ತಿ, ಒಟ್ಟು 121 ಕೆಜಿ ಲಿಫ್ಟ್ ಮಾಡಿ ಮೂರು ಕಂಚಿನ ಪದಕಗಳನ್ನು ಗೆದ್ದು ತಮ್ಮ ಊರು ಹಾಗೂ ತಾಲ್ಲೂಕಿಗೆ ಅಪಾರ ಹೆಮ್ಮೆ ತಂದಿದ್ದಾರೆ. ಶಿಸ್ತುಬದ್ಧ ತರಬೇತಿ, ನಿರಂತರ ಪರಿಶ್ರಮ ಮತ್ತು ಕ್ರೀಡೆಯ ಮೇಲಿನ ನಿಷ್ಠೆಯ ಫಲವಾಗಿ ಈ ಸಾಧನೆ ಸಾಧ್ಯವಾಗಿದ್ದು, ಇದು ಮುಂದಿನ ತಲೆಮಾರಿನ ಕ್ರೀಡಾಪಟುಗಳಿಗೆ ಮಹತ್ತರ ಪ್ರೇರಣೆಯಾಗಿದೆ.

# ಹೆತ್ತೇನಹಳ್ಳಿಯಲ್ಲಿ ವಿವಿಧ ಕಾಮಗಾರಿಗೆ ಚಾಲನೆ: ಮತ ಕ್ಷೇತ್ರದ ಅಭಿವೃದ್ಧಿಗೆ ಬದ್ಧ: ಶಾಸಕ ಸುರೇಶ್‌ಗೌಡ

ತುಮಕೂರು: ತುಮಕೂರು ಗ್ರಾಮಾಂತರ ಕ್ಷೇತ್ರದಲ್ಲಿ ಅಭಿವೃದ್ಧಿಪರ್ವ ಪ್ರಾರಂಭವಾಗಿದೆ. ತಾವು ವಿರೋಧ ಪಕ್ಷದಲ್ಲಿದ್ದರೂ ಹೋರಾಟ ಮಾಡಿ ಸರ್ಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡುತ್ತೇನೆ. ಕೇಂದ್ರ ಸಚಿವ ವಿ.ಸೋಮಣ್ಣ, ಜಿಲ್ಲಾ ಸಚಿವ ಡಾ.ಜಿ.ಪರಮೇಶ್ವರ್ ಅವರು ವಿವಿಧ ಇಲಾಖೆಗಳ ಅನುದಾನ ಕೊಡಿಸಲು ಸಹಕರಿಸುತ್ತಿದ್ದಾರೆ ಎಂದು ಶಾಸಕ ಬಿ.ಸುರೇಶ್‌ಗೌಡರು ಹೇಳಿದರು.

ಕ್ಷೇತ್ರದ ಹೆತ್ತೇನಹಳ್ಳಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸುಮಾರು 10 ಕೋಟಿ ರೂ. ಅಂದಾಜು ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಶಾಸಕರು, ಕ್ಷೇತ್ರದಲ್ಲಿ ಶಾಲಾಕಾಲೇಜು, ಆಸ್ಪತ್ರೆ, ರಸ್ತೆ, ಕೆರೆಗಳಿಗೆ ನೀರು ತುಂಬಿಸುವುದು, ದೇವಸ್ಥಾನಗಳ ಜೀರ್ಣೋದ್ಧಾರ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗಿದೆ. ಅಮರಶಿಲ್ಪಿ ಜಕಣಾಚಾರಿಯವರ ಹುಟ್ಟೂರು ಕೈದಾಳದ ಚನ್ನಕೇಶವ ದೇವಸ್ಥಾನ, ಗೂಳೂರು ಗಣಪತಿ ದೇವಸ್ಥಾನ, ಹೆತ್ತೇನಹಳ್ಳಿ ಮಾರಮ್ಮ ದೇವಸ್ಥಾನಗಳು ಒಳಗೊಂಡ ಈ ಭಾಗವನ್ನು ಆಕರ್ಷಕ ಪ್ರವಾಸಿ ಕೇಂದ್ರವನ್ನಾಗಿ ರೂಪಿಸಲು ಅಗತ್ಯ ಸೌಲಭ್ಯ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿಲ್ಲದಿದ್ದರೂ ಅಗತ್ಯವಿರುವ ಅನುದಾನ ತರುವ ಪ್ರಯತ್ನ ಮಾಡುತ್ತಿದ್ದೇನೆ. ಎಲ್ಲಾ ವಿಚಾರಗಳಿಗೂ ಆಡಳಿತ ಪಕ್ಷವನ್ನು ವಿರೋಧ ಮಾಡುವುದು ಸರಿಯಲ್ಲ, ಅಭಿವೃದ್ಧಿ ಕಾರ್ಯದಲ್ಲಿ ರಾಜಕಾರಣ ಮಾಡಬಾರದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಅವರೊಂದಿಗೆ



ವಿಶ್ವಾಸದಿಂದ ಅವರ ಸಹಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಮಾಡುತ್ತೇನೆ. ತಮಗೆ ಸಹಕರಿಸುತ್ತಿರುವ ಸಚಿವ ಡಾ.ಪರಮೇಶ್ವರ್ ಅವರಿಗೆ ಅಭಿನಂದನೆಗಳು ಎಂದರು.

ಹೆತ್ತೇನಹಳ್ಳಿ ದೇವಸ್ಥಾನ ರಸ್ತೆಯನ್ನು ವಿಸ್ತರಿಸಿ ಅಭಿವೃದ್ಧಿ ಮಾಡಲಾಗುತ್ತಿದೆ. ಈ ಕಾರ್ಯದಲ್ಲಿ ರಸ್ತೆ ಬದಿ ಅಂಗಡಿಯವರು ಜಾಗ ಕೊಟ್ಟು ಸಹಕರಿಸಬೇಕು. ನಿಮಗೆ ತೊಂದರೆ ಕೊಡದಂತೆ, ನಿಮ್ಮ ವಿಶ್ವಾಸ ಗಳಿಸಿ ರಸ್ತೆ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ವ್ಯಾಪಾರವನ್ನೇ ಜೀವನಾಧಾರ ಮಾಡಿಕೊಂಡಿರುವ ನಿಮ್ಮನ್ನು ಎತ್ತಂಗಡಿ ಮಾಡಿಸುವ ಉದ್ದೇಶವಿಲ್ಲ, ರಸ್ತೆ ಅಗಲೀಕರಣ ಸಂದರ್ಭದಲ್ಲಿ ತೊಂದರೆಯಾದರೆ ಶಾಸಕರ ಅನುದಾನದಲ್ಲಿ ನಿಮಗೆ ಸಹಾಯ ಮಾಡುತ್ತೇನೆ. ಹೆತ್ತೇನಹಳ್ಳಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಹೆಚ್ಚಿನ ಸೌಕರ್ಯ ಒದಗಿಸಬೇಕಾಗಿರುವುದರಿಂದ ಇಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗಿದೆ ಎಂದು ಹೇಳಿದರು.

ಕೈದಾಳ ಗ್ರಾಮದಲ್ಲಿ ಅಮರಶಿಲ್ಪಿ ಜಕಣಾಚಾರಿ ಸಮುದಾಯ ಭವನದ ಮುಂದುವರೆದ ಕಾಮಗಾರಿ, ಚನ್ನಕೇಶವ ದೇವಸ್ಥಾನ ಆವರಣದಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಪಾರ್ಕ್ ನಿರ್ಮಾಣ ಕಾಮಗಾರಿಕೆ ಈ ಸಂದರ್ಭದಲ್ಲಿ ಚಾಲನೆ ನೀಡಿದ ಶಾಸಕ ಸುರೇಶ್‌ಗೌಡರು, ಇಂದು ಚಾಲನೆಗೊಂಡ ಎಲ್ಲಾ ಕಾಮಗಾರಿಗಳನ್ನು ಯುಗಾದಿ ವೇಳೆಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವ ಗುರಿ ಇದೆ. ಆ ಸಂದರ್ಭದಲ್ಲಿ ನೂರು ಜೋಡಿಗಳ ಸಾಮೂಹಿಕ ವಿವಾಹ ಸಮಾರಂಭ ಏರ್ಪಡಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಗೂಳೂರು ಕೆರೆಗೆ ಹೇಮಾವತಿ ನೀರು ತುಂಬಿಸುವ ಯೋಜನೆ ರೂಪಿಸಲು ಮರಳೂರು ಕೆರೆಯಿಂದ ಗೂಳೂರು ಕೆರೆಗೆ ಸಂಪರ್ಕ ಒದಗಿಸುವ ಯೋಜನೆಗೆ ಮನವಿ ಮಾಡಲಾಗಿದೆ. ಈ ವರ್ಷ ಹೆತ್ತೇನಹಳ್ಳಿ ಕೆರೆ ತುಂಬಿಸಿ ಮಾರಮ್ಮ ದೇವಿಯ ತೆಪ್ಪೋತ್ಸವ ಮಾಡಲಾಗುವುದು. ಸೂಲದ ಆಂಜನೇಯ ದೇವಸ್ಥಾನ ಸಮೀಪ ಎರಡು ಎಕರೆ ಜಾಗ ಕೇಳಿದ್ದೇನೆ, ಜಾಗ ನೀಡಿದರೆ ಅಲ್ಲಿ 24/7 ಸೇವೆಯ 30 ಹಾಸಿಗೆಗಳ ಆಸ್ಪತ್ರೆ ಸ್ಥಾಪನೆ ಮಾಡಲಾಗುವುದು. ಇದರಿಂದ ಈ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದರು.

# ಸಮಯ ಪ್ರಜ್ಞೆಯಿಂದ ಪರೀಕ್ಷೆಯನ್ನು ಬರೆಯಿರಿ : ಕಾಲಹರಣ ಮಾಡದೇ ಭವಿಷ್ಯ ರೂಪಿಸಿಕೊಳ್ಳಿ

ಚಿಕ್ಕನಾಯಕನಹಳ್ಳಿ: –ಜ್ಞಾನ ಬೆಳೆಯಲು ಸದೃಢ ದೇಹವು ಮುಖ್ಯ ಅದ್ದರಿಂದ ಉತ್ತಮ ವ್ಯಾಯಾಮದಿಂದ ಮಾನಸಿಕ ಹಾಗೂ ದೈಹಿಕ ವಾಗಿ ಸದೃಡರಾಗಿ ಸಮಯ ಪ್ರಜ್ಞೆಯಿಂದ ಪರೀಕ್ಷೆಯನ್ನು ಹೆದರಿಸಿ ವ್ಯರ್ಥವಾಗಿ ಕಾಲಹರಣ ಮಾಡದೇ ಅಬ್ಯಾಸ ಹಾಗೂ ಅದ್ಯಯನ ಮಾಡುವ ಮೂಲಕ ಉತ್ತಮ ಪಲಿತಾಂಶ ಪಡೆದು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ರೋಟರಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದ ಎಸ್‌ಎಸ್‌ಎಲ್ ಸಿ ಮಕ್ಕಳಿಗೆ ಏರ್ಪಡಿಸಲಾಗಿದ್ದ ಪ್ರೇರಣಾ ಶಿಬಿರವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು ಪೋಷಕರು ಹಾಗೂ ಈ ಸಮಾಜ ನಿಮ್ಮ ಭವಿಷ್ಯವನ್ನು ರೂಪಿಸಲು ಸಿದ್ದವಿದ್ದು ಅವರ ಆಸೆಯಂತೆ ನಿಮ್ಮ ಅಬ್ಯಾಸಗಳು ಉತ್ತಮವಾಗಿದ್ದು ಈ ಬಾರಿಯ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕಗಳನ್ನು ತೆಗೆದುಕೊಳ್ಳುವ ಮೂಲಕ ನಮ್ಮ ತಾಲ್ಲೂಕಿಗೆ ಕೀರ್ತಿ ತರುವ ಮೂಲಕ ನಿಮ್ಮ ಪೋಷಕರ ಆಸೆಯನ್ನು ಈಡೇರಿಸಿ ಎಂದ ಅವರು ಕಳೆದ ಎರಡು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ಶೈಕ್ಷಣಿಕ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕು ಮೊದಲನೇ ಸ್ಥಾನದಲ್ಲಿದ್ದು ಈ ವರ್ಷವು ಇನ್ನು ಹೆಚ್ಚು ವಿದ್ಯಾರ್ಥಿಗಳು 625 ಕ್ಕೆ 625ಅಂಕಗಳನ್ನು ಗಳಿಸುವಂತೆ ಮಾಡುವುದು ಸೇರಿದಂತೆ ಎ,ಬಿ,ಸಿ ಎಂದು ಗ್ರೇಡ್‌ಗಳನ್ನು ಮಾಡಿ ಆ ಮೂಲಕ ವಿದ್ಯಾರ್ಥಿಗಳಿಗೆ ಸಂಜೀವನಿ ಶಿಬಿರ, ಪ್ರೇರಣಾ ಶಿಬಿರದ ಮೂಲಕ ಅಗತ್ಯ ಸಲಕರಣೆಗಳನ್ನು ನೀಡುವ ಮೂಲಕ ಉತ್ತಮ ಪಲಿತಾಂಶವನ್ನು ಪಡೆಯುವ ನೀರಿಕ್ಷೆಯಲ್ಲಿದ್ದು ಇದಕ್ಕೆ ವಿದ್ಯಾರ್ಥಿಗಳು ಅದ್ಯಯನ ಮಾಡಬೇಕು ನಿಮಗೆ ಯಾವುದೇ ವಿಷಯಕ್ಕೆ



ಸಂಬಂದಿಸಿದಂತೆ ಸಮಸ್ಯೆಗಳಿದ್ದರೆ ಶಿಕ್ಷಕರನ್ನು ಕೇಳಿ ಬಗೆಹರಿಸಿಕೊಳ್ಳಿ ಪರೀಕ್ಷೆ ಎಂಬ ಭಯವನ್ನು ಬಿಟ್ಟು ಉತ್ತಮವಾಗಿ ಪರೀಕ್ಷೆಯಲ್ಲಿ ಬರೆಯುವ ಮೂಲಕ ಹೆಚ್ಚು ಅಂಕಗಳನ್ನು ಗಳಿಸಿ ಪೋಷಕರಿಗೆ ಹಾಗೂ ತಾಲ್ಲೂಕಿಗೆ ಕೀರ್ತಿತರುವಂತೆ ತಿಳಿಸಿದರು,.

ನಿವೃತ್ತ ಮುಖ್ಯಶಿಕ್ಷಕ ಎಂ.ಎಲ್.ಮಲ್ಲಿಕಾರ್ಜುನಯ್ಯ ಮಾತನಾಡಿ ತಾಲ್ಲೂಕಿನ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ನೀಡುವ ಉದ್ದೇಶದಿಂದ ಶಾಸಕರುಯ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅದರಂತೆ ವಿದ್ಯಾರ್ಥಿಗಳು ಉತ್ತಮವಾಗಿ ಓದುವ ಮೂಲಕ ಅಂಕಗಳನ್ನು ಗಳಿಸಿ ಎಂದ ಅವರು ಈ ಬಾರಿ 625ಕ್ಕೆ 625ಅಂಕಗಳನ್ನು ತೆಗೆದುಕೊಳ್ಳುವಂತಹ ವಿದ್ಯಾರ್ಥಿಗಳಿಗೆ ರೋಟರಿ ಕ್ಲಬ್‌ವತಿಯಿಂದ 25ಸಾವಿರ ಬಹುಮಾನವನ್ನು ನೀಡುವುದಾಗಿ ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಮಾತನಾಡಿ ನುರಿತ 140ಶಿಕ್ಷಕರ ತಂಡವನ್ನು ರೂಪಿಸಿ ಎಲ್ಲಾ ವಿಷಯಗಳಿಗೆ ವಿಶೇಷವಾಗಿ ಶಿಕ್ಷಕರಿಂದ ತರಗತಿಗಳನ್ನು ನೀಡುವುದು ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಮಕ್ಕಳಿಗೆ ಮಾಹಿತಿ ನೀಡುವುದು ಪರೀಕ್ಷೆಗಳನ್ನು ನಡೆಸುವುದು ಹಾಗೂ ಶಿಬಿರಗಳನ್ನು ಮಾಡುವ ಮೂಲಕ 600ಕ್ಕು ಹೆಚ್ಚು ಅಂಕಗಳನ್ನು ಗಳಿಸುವಂತಹ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿ ನಡೆಸುವುದು ಇನ್ನು ಕಡಿಮೆ ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ಈ ಬಾರಿ ಎಸ್‌ಎಸ್ ಎಲ್‌ಸಿಯಲ್ಲಿ ಹೆಚ್ಚ ಪಲಿತಾಂಶ ಬರಲು ಮಕ್ಕಳು ಶ್ರಮಿಸಬೇಕು ಎಂದರು.

ಪ್ರೇರಣ ಶಿಬಿರದಲ್ಲಿನ ಸುಹಾಸ್ ಎಂಬ ವಿದ್ಯಾರ್ಥಿ ಮಾತನಾಡಿ ನಾವು ಪರೀಕ್ಷೆಯ ವೇಳೆ ಕೊಠಡಿಯಲ್ಲಿ ಬರುವಂತಹ ಶಿಕ್ಷಕರು, ನಿರೀಕ್ಷಕರು, ಇವರ ಬಗ್ಗೆ ಗಮನ ಹರಿಸುವ ಮೂಲಕ ಸಮಯವನ್ನು ಹಾಳು ಮಾಡಿಕೊಳ್ಳುತ್ತೇವೆ ಇದರಿಂದ ನಮಗೆ ಸಮಯದ ಅಭಾವ ಉಂಟಾಗುತ್ತದೆ ಅದ್ದರಿಂದ ಯಾವುದರ ಬಗ್ಗೆಯು ಗಮನ ಹರಿಸದೇ ಸಮಯವನ್ನು ಹಾಳು ಮಡದೇ ನಮ್ಮ ಸಮಯಕ್ಕೆ ತಕ್ಕಂತೆ ನಮ್ಮ ಪರೀಕ್ಷೆಯಲ್ಲಿ ಉತ್ತರ ಬರೆಯುವ ಮೂಲಕ ಅಂಕಗಳನ್ನು ಗಳಿಸುವುದೇ ನಮ್ಮ ಉದ್ದೇಶವಾಗಿರಬೇಕು ಎಂದರು.

ಈ ಸಂದರ್ಭದಲ್ಲಿ ಮಾಜಿ ರೋಟರಿ ಅಧ್ಯಕ್ಷ ಶಿವಣ್ಣ ಮಿಲಿಟರಿ, ಕಸಾಪ ಅಧ್ಯಕ್ಷ ಎಂ.ಎಸ್.ರವಿಕುಮಾರ್, ಶಿಕ್ಷಕರುಗಳಾದ ಗಂಗಾಧರ್, ಶಿವಣ್ಣ, ರಮೇಶ್ ಸೇರಿದಂತೆ ಮತ್ತಿತರರು ಇದ್ದರು.

# ಸರ್ಕಾರಿ ಸಮಾರಂಭಗಳಲ್ಲಿ ವಿಕಲಚೇತನ ಸ್ನೇಹಿ ವ್ಯವಸ್ಥೆ ಮಾಡಲು ಜಿಲ್ಲಾಡಳಿತಕ್ಕೆ ಮನವಿ

ತುಮಕೂರು: ಸರ್ಕಾರದ, ಜಿಲ್ಲಾಡಳಿತದ ಕಾರ್ಯಕ್ರಮಗಳಲ್ಲಿ ವಿಕಲಚೇತನರು ಭಾಗವಹಿಸಲು ಅಗತ್ಯ ವ್ಯವಸ್ಥೆ ಮಾಡಿ, ವಿಕಲಚೇತನರೂ ಸಮಾಜವಾಗಿ, ಗೌರವಯುತವಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲು ಕೋರಿ ಪ್ರೇರಣಾ ಅಂಗವಿಕಲರ ಕ್ಷೇಮಾಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನೂರುನ್ನೀಸಾ ಅವರಿಗೆ ಮನವಿಪತ್ರ ಸಲ್ಲಿಸಿದರು.



ಈ ವೇಳೆ ಮಾತನಾಡಿದ ಟ್ರಸ್ಟ್ ಕಾರ್ಯದರ್ಶಿ ಎಸ್.ಬಾಬು, ಜಿಲ್ಲಾಡಳಿತದ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲೂ ವಿಕಲಚೇತನಸ್ನೇಹಿ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸಬೇಕು, ಸಭಾಂಗಣ, ವೇದಿಕೆ, ಪ್ರವೇಶ–ನಿರ್ಗಮನ, ಶೌಚಾಲಯಗಳಲ್ಲಿ ರ್‍ಯಾಂಪ್, ಹ್ಯಾಂಡ್ರೆಲ್, ಲಿಫ್ಟ್ ವ್ಯವಸ್ಥೆ ಮಾಡಬೇಕು, ವಿಶ್ವ ಅಂಗವಿಕಲರ ದಿನಾಚರಣೆ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ 21 ವಿಧದ ಅಂಗವೈಕಲ್ಯಗಳನ್ನು ಗಮನದಲ್ಲಿಟ್ಟುಕೊಂಡು ವಿಕಲಚೇತನರ ಭಾಗವಹಿಸುವಿಕೆಗೆ ಅಗತ್ಯ ವ್ಯವಸ್ಥೆ ಮಾಡಬೇಕು. ವಿಕಲಚೇತನರು ವೇದಿಕೆ ಹತ್ತಲು ಶಾಶ್ವತ ಅಥವಾ ತಾತ್ಕಾಲಿಕ ರ್‍ಯಾಂಪ್ ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ವಿವಿಧ ಅನುಕೂಲಗಳಿಲ್ಲದೆ ಸರ್ಕಾರದ ಕಾರ್ಯಕ್ರಮಗಳಲ್ಲಿ ವಿಕಲಚೇತನರು ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಕಾರ್ಯಕ್ರಮಗಳಲ್ಲಿ ವ್ಹೀಲ್ ಚೇರ್ ಬಳಸುವವರಿಗೆ ರ್‍ಯಾಂಪ್, ದೃಷ್ಟಿಹೀನರಿಗೆ ಸೂಕ್ತ ಮಾರ್ಗಸೂಚಿ ಹಾಗೂ ಸಹಾಯ ವ್ಯವಸ್ಥೆ ಕಲ್ಪಿಸಬೇಕು, ಸೂಕ್ತ ಶೌಚಾಲಯ ವ್ಯವಸ್ಥೆ ಮಾಡಿ ವಿಕಲಚೇತನರೂ ಸಾಮಾನ್ಯರಿಗೆ ಸಮಾನರಾಗಿ, ಗೌರವಯುತವಾಗಿ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಲು ಜಿಲ್ಲಾಡಳಿತ ಅಗತ್ಯ ಅನುಕೂಲ ಮಾಡಿಕೊಡಬೇಕು ಈ ಬಗ್ಗೆ ತಾವು ಜಿಲ್ಲಾಡಳಿತಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಎಸ್.ಬಾಬು ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.